# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-40 ಶೋಭಕೃತ್ ನಾಮ ಸಂವತ್ಸರ, ಮಾಘ - ಫಾಲ್ಗುಣ ಮಾಸ, ಮಾರ್ಚ್ - 2024, ಸಂಚಿಕೆ-13, ಪುಟಗಳು-36 ಬೆಲೆ ರೂ.15/-

## ಯಗಟಿಯಲ್ಲಿ ಬ್ರಾಹ್ಮಣ ಸಂಘದ ಸೇವಾದೀಕ್ಷೆ ಹಾಗೂ ಸಾಧಕರಿಗೆ ಸನ್ಮಾನ

## ರಾಜ್ಯ ಸರ್ಕಾರ ಸ್ವೀಕರಿಸಿರುವ ಜಾತಿ ಗಣತಿ ವರದಿ ವೈಜ್ಞಾನಿಕವಾಗಿಲ್ಲ





## ಶಿವಮೊಗ್ಗದಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಹಾಲಿ ಸಂಸದರಾದ ಶ್ರೀ ಬಿ.ವೈ ರಾಘವೇಂದ್ರ ಅವರಿಗೆ ಅಭಿನಂದನಾ ಸಮಾರಂಭ



## ಸಾರಸ್ವತ ಲೋಕದ ವಿದ್ವತ್ ಮುಕುಟ 'ಶತಾವಧಾನಿ ಆರ್.ಗಣೇಶ್' ಅವರಿಗೆ ಗೌರವ ಡಾಕ್ಟರೇಟ್



# PRATIBHA ACADEMY

**Formerly: Pratibha Bala Mandira**
**Celebrating 60 YEARS of academic excellence**

## ADMISSIONS NOW OPEN!

**KINDERGARTEN | PRIMARY & HIGH SCHOOL**



**DIAMOND JUBILEE MERIT SCHOLARSHIPS ARE OFFERED FOR ADMISSIONS 2024-2025**



***Composite Science & Mathematics Lab***
***World-class Basketball & Volleyball court***
***Smart-class and Digital learning***
***STEM-enriched Education***
School Van Facility available

www.pratibhaschool.com +91-80-26710170

No. 9, 18th Main
Banashankari II Stage
Bengaluru

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ
ಕಾರ್ತಿಕ್ ಬಾಪಟ್
ಟಿ.ಎಲ್.ಎಸ್. ಕುಮಾರ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಅಪರಾಧಂ ಸಹೇತಾಲ್ಪಂ ತು ಷ್ಯೇದಲ್ಪೇ ಪಿ ಚೋದಯೇ ।**
**ಮಹೋಪಕಾರನ್ ಚ ಅಧ್ಯಕ್ಷನ್ ಪ್ರಗ್ರಹೇಣ ಅಭಿಪೂಜಯೇತ್ ॥**

"ಬೇರೆಯವರು ಮಾಡಿದ ಸಣ್ಣ ತಪ್ಪುಗಳನ್ನು ಸಹಿಸಿಕೊಳ್ಳಬೇಕು. ತನಗೆ ಅಲ್ಪ ಏಳಿಗೆಯಾದರೂ ಸಂತೋಷಗೊಳ್ಳಬೇಕು. ತನಗೆ ಬಹಳ ಉಪಕಾರ ಮಾಡಿದವರನ್ನು ವಿಶೇಷವಾಗಿ ಗೌರವಿಸಬೇಕು."

ಚಂದ್ರಗುಪ್ತ ಮೌರ್ಯನ ಪ್ರಧಾನಮಂತ್ರಿಯಾಗಿದ್ದ ಚಾಣಕ್ಯ ಅಥವಾ ಕೌಟಿಲ್ಯನ ಮಾತಿದು. ತಿಳಿದೋ, ತಿಳಿದೆಯೋ ಕೆಲವರು ತಮ್ಮ ನಡೆ–ನುಡಿಗಳಿಂದ ಅನ್ಯರ ವಿಷಯದಲ್ಲಿ ಕಟುವಾಗಿ ನಡೆದುಕೊಂಡು ಮನಸ್ಸಿಗೆ ಘಾಸಿ ಮಾಡುತ್ತಾರೆ. ಅವರ ಈ ವರ್ತನೆಯನ್ನು ಸಜ್ಜನರು ಕ್ಷಮಿಸಬೇಕು. ಕ್ಷಮೆಯೇ ವೀರನಿಗೆ ಭೂಷಣವೆಂದು ಯುಧಿಷ್ಠಿರನು ಮಹಾಭಾರತದ ಯಕ್ಷಪ್ರಶ್ನೆ ಪ್ರಸಂಗದಲ್ಲಿ ತಿಳಿಸುತ್ತಾನೆ. (**ಕ್ಷಮಾ ವೀರಸ್ಯ ಭೂಷಣಮ್** ।) ಜೀವನವು ಬಹಳ ಸುಲಭವಾದ್ದಲ್ಲ. ಅದು ಸುಖ–ದುಃಖ, ಆಸೆ–ನಿರಾಸೆ, ಸೋಲು–ಗೆಲವು, ಅವಮಾನ–ಸನ್ಮಾನ ಮುಂತಾದ ದ್ವಂದ್ವಗಳಿಂದ ಕೂಡಿದೆ. ನಾವು ಕಷ್ಟಪಟ್ಟು ಒಂದು ರಂಗದಲ್ಲಿ ಸ್ವಲ್ಪ ಏಳಿಗೆ ಅಥವ ಅಭಿವೃದ್ಧಿಯನ್ನು ಹೊಂದಿದರೂ ಸಂತೋಷಿಸಿ, ಸಂಭ್ರಮಿಸಬೇಕು. ಬೇರೆಯವರ ಶ್ರೀಮಂತಿಕೆ, ಸಾಧನೆ, ಕೀರ್ತಿಗಳನ್ನು ನೋಡಿ ಕೊರಗುವುದರಿಂದ ಯಾವ ಲಾಭವೂ ಇಲ್ಲ. ಸಮಯವೂ ಹಾಳು.

ಉದಾರವಾದ ಮನಸ್ಸುಳ್ಳ, ಸಾತ್ವಿಕ ಸ್ವಭಾವದ ಜನರು ಅವಕಾಶ ಸಿಕ್ಕಾಗ, ಬೇರೆಯವರಿಗೆ ಸಹಾಯ ಮಾಡಿ ಉಪಕರಿಸುತ್ತಾರೆ. ಅಂತಹ ಸಹಾಯ ಪಡೆದವರು ಆ ದಾನಿಗಳನ್ನು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಳ್ಳಬೇಕು. ರಾಮಾಯಣದ ಕಿಷ್ಕಿಂಧಕಾಂಡದಲ್ಲಿ ರಾಮ–ಸುಗ್ರೀವರ ಸಂಭಾಷಣೆಯಲ್ಲಿ ರಾಮನು ಸ್ನೇಹ ಮತ್ತು ಉಪಕಾರಗಳ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸಿ, ಕೃತಜ್ಞತೆ ಮನುಷ್ಯರ ಗುಣಗಳಲ್ಲಿ ಶ್ರೇಷ್ಠವಾದುದು ಎಂದು ವಿವರಿಸುತ್ತಾನೆ. ಈ ಶ್ಲೋಕದಲ್ಲಿ ಪ್ರಸ್ತಾಪಿಸಿರುವ ಕ್ಷಮೆ, ಸಂತೃಪ್ತಿ, ಕೃತಜ್ಞತೆ ಎಂಬ ಮೂರು ಗುಣಗಳು ಜನರ ದಿನನಿತ್ಯದ ವ್ಯವಹಾರಗಳನ್ನು ಸುಗಮಗೊಳಿಸುತ್ತವೆ. ಈ ಗುಣಗಳನ್ನು ನಮ್ಮ ಜೀವನದಲ್ಲಿ, ಅಳವಡಿಸಿಕೊಳ್ಳುವುದರಿಂದ ಬಾಳು ಆನಂದದಿಂದ ಕೂಡಿರುತ್ತದೆ, ಸಂಸ್ಕಾರಮಯವಾಗಿರುತ್ತದೆ ಎಂದು ಕೌಟಿಲ್ಯನ ಅಭಿಪ್ರಾಯ.

**– ಪ್ರೊ. ಎಂ.ಕೆ. ಶ್ರೀಧರ್,**
ಪ್ರಧಾನ ಸಂಪಾದಕರು

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**– ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ಬ್ರಹ್ಮಜ್ಞಾನಾವಲೀಮಾಲಾ

– ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ದೃಗ್ದೃಶ್ಯೌ ದ್ವೌ ಪದಾರ್ಥೌ ಸ್ತಃ ಪರಸ್ಪರವಿಲಕ್ಷಣೌ ।**
**ದೃಗ್ ಬ್ರಹ್ಮ ದೃಶ್ಯಂ ಮಾಯೇತಿ ಸರ್ವವೇದಾಂತಡಿಂಡಿಮಃ ॥17॥**

**ಅನುವಾದ :** ದೃಕ್ ಹಾಗೂ ದೃಶ್ಯ ಎಂಬ ಪರಸ್ಪರ ವಿಲಕ್ಷಣವಾದ ಎರಡು ಪದಾರ್ಥಗಳಿವೆ. ಅವುಗಳಲ್ಲಿ ದೃಕ್ ಎನ್ನುವುದು ಬ್ರಹ್ಮವಾಗಿದ್ದರೆ ದೃಶ್ಯವು ಮಾಯೆ ಎಂದು ಎಲ್ಲ ವೇದಾಂತಗಳ ಘೋಷಣೆಯಾಗಿದೆ.

**ವಿವರಣೆ :** ದೃಕ್ ಎಂದರೆ ಚೈತನ್ಯ. ದೃಶ್ಯ ಎಂದರೆ ಅದರ ವಿಷಯ. ಸಂಪೂರ್ಣ ನಾಮರೂಪಾತ್ಮಕ ಜಗತ್ತು ಚೈತನ್ಯದ ವಿಷಯವಾಗಿದೆ. ವೇದಾಂತವು ಜಗತ್ತು ಮಾಯೆಯ ಕಾರ್ಯ ಎಂದು ಸಾರುತ್ತದೆ. ಮಾಯೆ ಹಾಗೂ ಅದರ ವಿಕಾರಗಳು ತಮ್ಮ ಅಸ್ತಿತ್ವಕ್ಕಾಗಿ ಚೈತನ್ಯಸ್ವರೂಪವಾದ ಬ್ರಹ್ಮವನ್ನೇ ಅವಲಂಬಿಸಿವೆ. ಹಾಗಾಗಿ ಬ್ರಹ್ಮ ಒಂದೇ ಸ್ವತಂತ್ರವಾದ ಅಸ್ತಿತ್ವವುಳ್ಳ ಸತ್ಯ ವಸ್ತುವಾಗಿದೆ.

**ಅಹಂ ಸಾಕ್ಷೀತಿ ಯೋ ವಿದ್ಯಾದ್ ವಿವಿಚ್ಯೈವಂ ಪುನಃ ಪುನಃ ।**
**ಸ ಏವ ಮುಕ್ತಃ ಸನ್ ವಿದ್ವಾನ್ ಇತಿ ವೇದಾಂತಡಿಂಡಿಮಃ ॥18॥**

**ಅನುವಾದ :** ಯಾವನು ಈ ರೀತಿ ಪುನಃ ಪುನಃ ವಿವೇಕವನ್ನು ಮಾಡಿ ನಾನು ಸಾಕ್ಷಿ ಎಂದು ತಿಳಿದುಕೊಳ್ಳುವನೋ, ಅವನೇ ಜ್ಞಾನಿಯಾಗಿ ಮುಕ್ತನಾಗುವನು ಎಂದು ವೇದಾಂತಗಳು ಸಾರುತ್ತವೆ.

**ವಿವರಣೆ :** ಮೋಕ್ಷವನ್ನು ಬಯಸುವವನು ಈ ಗ್ರಂಥದಲ್ಲಿ ತಿಳಿಸಿದಂತೆ ತನ್ನನ್ನು ದೃಶ್ಯಗಳಾದ ಬಾಹ್ಯ ವಿಷಯಗಳು ಹಾಗೂ ದೇಹೇಂದ್ರಿಯಾದಿಗಳಿಂದ ಬೇರೆಯಾದ ಸಾಕ್ಷಿ ಎಂದು ತಿಳಿದುಕೊಳ್ಳಬೇಕು. ದೃಶ್ಯಗಳ ಸಾಕ್ಷಿಯಾದ ನಾನು ಜಗತ್ತಿನ ಅಧಿಷ್ಠಾನನಾದ ಪರಬ್ರಹ್ಮ. ನನಗೆ ಯಾವುದೇ ಸೀಮೆಯೂ ಇಲ್ಲ. ಜಗತ್ತು ಮಿಥ್ಯೆ. ಮಿಥ್ಯೆಯಾದ ಜಗತ್ತು ಸತ್ಯವಾದ ನನ್ನ ಸ್ವರೂಪವನ್ನು ಎಂದೆಂದಿಗೂ ಸ್ಪರ್ಶಿಸಲಾರದು ಎಂದು ಚೆನ್ನಾಗಿ ತಿಳಿದುಕೊಂಡವನೇ ಆತ್ಮಜ್ಞಾನಿ ಎನ್ನಲ್ಪಡುವನು. ಆತ್ಮಜ್ಞಾನಿಯಾದವನು ಜೀವಂತ ಅವಸ್ಥೆಯಲ್ಲೇ ಮುಕ್ತಿಯನ್ನು ಅನುಭವಿಸುವನು. ಜ್ಞಾನಿಯಾದವನು ಮುಕ್ತಿಗಾಗಿ ಬೇರೆ ಯಾವುದೇ ಪ್ರಯತ್ನವನ್ನು ಮಾಡಬೇಕಾಗುವುದಿಲ್ಲ.

**ಘಟಕುಡ್ಯಾದಿಕಂ ಸರ್ವಂ ಮೃತ್ತಿಕಾಮಾತ್ರಮೇವ ಚ ।**
**ತದ್ವದ್ ಬ್ರಹ್ಮ ಜಗತ್ಸರ್ವಮ್ ಇತಿ ವೇದಾಂತಡಿಂಡಿಮಃ ॥19॥**

**ಅನುವಾದ :** ಮಡಕೆ, ಗೋಡೆ ಮುಂತಾದವು ಮಣ್ಣೊಂದೇ ಆಗಿರುವಂತೆ ಜಗತ್ತೆಲ್ಲವೂ ಬ್ರಹ್ಮವೇ ಆಗಿದೆ ಎಂದು ವೇದಾಂತಗಳು ಸಾರುತ್ತವೆ.

**ವಿವರಣೆ :** ಮಣ್ಣಿನಿಂದ ನಿರ್ಮಿಸಲ್ಪಟ್ಟ ಮಡಕೆ, ಗೋಡೆ ಇತ್ಯಾದಿಗಳಲ್ಲಿ ಇರುವಂತಹ ವಸ್ತು ಮಣ್ಣು ಒಂದೇ ಆಗಿದೆ. ಮಡಕೆ ಗೋಡೆ ಎನ್ನುವ ಸ್ವತಂತ್ರ ವಸ್ತುಗಳು ಇಲ್ಲವೇ ಇಲ್ಲ. ಒಂದೇ ಮಣ್ಣು ಬೇರೆ ಬೇರೆ ರೂಪಗಳಲ್ಲಿ ತೋರಿಕೊಂಡಾಗ ಅದಕ್ಕೆ ಬೇರೆ ಬೇರೆ ಹೆಸರುಗಳನ್ನು ಕೊಡಲಾಗುತ್ತದೆ. ಅದೇ ರೀತಿ ಜಗತ್ತಿನಲ್ಲಿರುವ ನಾನಾ ವಿಷಯಗಳು ಬ್ರಹ್ಮವಸ್ತುವಿನಲ್ಲಿ ಕಲ್ಪಿತವಾದ ನಾಮರೂಪಗಳೇ ಆಗಿವೆ. ಹಾಗಾಗಿ ಸಂಪೂರ್ಣ ಜಗತ್ತು ಬ್ರಹ್ಮವೇ ಎಂದು ವೇದಾಂತಗಳು ಏಕಕಂಠದಿಂದ ಘೋಷಿಸುತ್ತವೆ.

**ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ।**
**ಅನೇನ ವೇದ್ಯಂ ಸಚ್ಛಾಸ್ತ್ರಮ್ ಇತಿ ವೇದಾಂತಡಿಂಡಿಮಃ ॥20॥**

**ಅನುವಾದ :** ಬ್ರಹ್ಮವು ಸತ್ಯ, ಜಗತ್ತು ಮಿಥ್ಯೆ, ಜೀವವು ಬ್ರಹ್ಮವೇ ಹೊರತು ಬೇರೇನೂ ಅಲ್ಲ. ಈ ರೀತಿಯಾಗಿ ಸಚ್ಛಾಸ್ತ್ರವನ್ನು ತಿಳಿದುಕೊಳ್ಳಬೇಕು ಎಂದು ವೇದಾಂತಗಳ ಘೋಷಣೆಯಾಗಿದೆ.

**ವಿವರಣೆ :** ಈ ಶ್ಲೋಕದ ಪೂರ್ವಾರ್ಧವು ಎಲ್ಲ ವೇದಾಂತಗಳ ಸಾರವನ್ನು ಸಂಕ್ಷೇಪವಾಗಿ ತಿಳಿಸುತ್ತದೆ. ಸತ್ಯವಾದದ್ದು ಬ್ರಹ್ಮವೊಂದೇ. ಜಗತ್ತು ಮಿಥ್ಯೆ. ಜೀವವು ಬ್ರಹ್ಮವೇ ಆಗಿದೆ. ಜೀವವು ಯಾವ ರೀತಿಯಲ್ಲೂ ಬ್ರಹ್ಮನಿಗಿಂತ ಬೇರೆಯಲ್ಲ. ಇದು ಸಚ್ಛಾಸ್ತ್ರವಾದ ವೇದಾಂತದ ಸಾರವಾಗಿದೆ. ವೇದಾಂತವು ಸದ್ರೂಪವಾದ ಬ್ರಹ್ಮವನ್ನು ಪ್ರತಿಪಾದಿಸುವುದರಿಂದ ಅದನ್ನು ಸಚ್ಛಾಸ್ತ್ರ ಎನ್ನಲಾಗಿದೆ.

**ಅಂತರ್ಜ್ಯೋತಿರ್ಬಹಿರ್ಜ್ಯೋತಿಃ ಪ್ರತ್ಯಗ್ಜ್ಯೋತಿಃ ಪರಾತ್ಪರಃ।**
**ಜ್ಯೋತಿರ್ಜ್ಯೋತಿಃ ಸ್ವಯಂಜ್ಯೋತಿರಾತ್ಮಜ್ಯೋತಿಃ ಶಿವೋಽಸ್ಮ್ಯಹಮ್॥21॥**

**ಅನುವಾದ :** ಪರಾತ್ಪರನೂ ಒಳಗಿನ ಜ್ಯೋತಿಯೂ, ಹೊರಗಿನ ಜ್ಯೋತಿಯೂ, ಪ್ರತ್ಯಗ್ಜ್ಯೋತಿಯೂ, ಎಲ್ಲ ಜ್ಯೋತಿಗಳ ಜ್ಯೋತಿಯೂ, ಸ್ವಯಂಜ್ಯೋತಿಯೂ. ಆತ್ಮಜ್ಯೋತಿಯೂ ಆದ ಶಿವನು ನಾನಾಗಿರುವೆನು.

**ವಿವರಣೆ :** ಪರ ಎಂದರೆ ಜಗತ್ತಿಗೆ ಕಾರಣವಾದ ಪ್ರಕೃತಿ. ಬ್ರಹ್ಮನು ಪ್ರಕೃತಿಗೂ ಅಧಿಷ್ಠಾನನಾದ್ದರಿಂದ ಉತ್ಕೃಷ್ಟನಾಗಿರುವನು. ಹಾಗಾಗಿ ಬ್ರಹ್ಮನನ್ನು "ಪರಾತ್ ಪರಃ" ಎಂದು ಕರೆದಿರುತ್ತಾರೆ. ಈ ಪರಾತ್ಪರನಾದ ಬ್ರಹ್ಮನು ನಮ್ಮ ಶರೀರದ ಒಳಗಿರುವ ಅಂತಃಕರಣ ಹಾಗೂ ಅದರಲ್ಲಿರುವ ವೃತ್ತಿಗಳನ್ನು ಪ್ರಕಾಶಿಸುವ ಜ್ಯೋತಿಯಾದ್ದರಿಂದ ಅಂತರ್ಜ್ಯೋತಿ ಎನಿಸಿಕೊಳ್ಳುತ್ತದೆ. ಬಾಹ್ಯ ವಿಷಯಗಳನ್ನು ತಿಳಿಯಲೂ ಆತ್ಮನ ಚೈತನ್ಯವು ಆವಶ್ಯಕ. ಹಾಗಾಗಿ ಅದು ಬಹಿರ್ಜ್ಯೋತಿಯೂ ಆಗಿದೆ. ಆತ್ಮನಿಗಿಂತ ಭಿನ್ನವಾದ ಸೂರ್ಯಾದಿ ಜ್ಯೋತಿಗಳು ಜಡವೂ ಮಿಥ್ಯೆಯೂ ಆಗಿವೆ. ಆದರೆ ಆತ್ಮನು ಸತ್ಯ ಹಾಗೂ ಚೈತನ್ಯಸ್ವರೂಪನಾಗಿರುವುದರಿಂದ ಅವುಗಳಿಗಿಂತ ವಿಲಕ್ಷಣವಾದ ಜ್ಯೋತಿ. ಹಾಗಾಗಿ ಆತ್ಮನನ್ನು ಪ್ರತ್ಯಗ್ಜ್ಯೋತಿ ಎಂದಿದ್ದಾರೆ. ಅದು ಸೂರ್ಯಾದಿ ಬಾಹ್ಯಜ್ಯೋತಿಗಳನ್ನು ಪ್ರಕಾಶಿಸುವ ಜ್ಯೋತಿಯಾದ್ದರಿಂದ ಜ್ಯೋತಿರ್ಜ್ಯೋತಿ ಎಂದರೆ ಉಳಿದ ಎಲ್ಲ ಜ್ಯೋತಿಗಳಿಗೂ ಜ್ಯೋತಿಯಾಗಿದೆ. ಆತ್ಮನನ್ನು ಪ್ರಕಾಶಿಸಲು ಬೇರೆ ಜ್ಯೋತಿಯ ಆವಶ್ಯಕತೆ ಇಲ್ಲವಾದ್ದರಿಂದ ಆತ್ಮನು ಸ್ವಯಂಜ್ಯೋತಿ. ಆತ್ಮನು ಸಂಸಾರದಿಂದ ಮುಕ್ತನಾದ ಆನಂದಸ್ವರೂಪನಾದ್ದರಿಂದ ಶಿವ ಎನ್ನಲ್ಪಡುವನು. ಆ ಶಿವನು ನಾನೇ ಎಂದು ಮುಮುಕ್ಷುವು ತಿಳಿದುಕೊಳ್ಳಬೇಕು.

**॥ ಇಲ್ಲಿಗೆ ಬ್ರಹ್ಮಜ್ಞಾನಾವಲೀಮಾಲಾ ಎನ್ನುವ ಗ್ರಂಥದ ಅನುವಾದ ಹಾಗೂ ವಿವರಣೆ ಮುಗಿಯಿತು. ॥**

# ಅಧ್ಯಕ್ಷರ ನುಡಿ



**ನಾಡಿನ ಸಮಸ್ತ ವಿಪ್ರಭಾಂದವರಿಗೆ ಯುಗಾದಿಯ ಹಾರ್ದಿಕ ಶುಭಾಶಯಗಳು,**

ಯುಗಾದಿ ಬಂತೆಂದರೆ ಮಕ್ಕಳಿಗಂತೂ ಹೇಳತೀರದ ಸಂತಸ ಯುಗಾದಿಯೊಂದಿಗೆ ಬೇಸಿಗೆ ರಜೆಯ ಸಂಭ್ರಮಕ್ಕೆ ಮಕ್ಕಳು ಸಜ್ಜಾಗುತ್ತಿರುತ್ತಾರೆ. ಈ ರಜೆಯ ದಿನಗಳಲ್ಲಿ ಮಕ್ಕಳಿಗೆ ಆಟ ಪಾಠಗಳೊಂದಿಗೆ ನಮ್ಮ ಸಂಸ್ಕೃತಿ, ಆಚಾರ ವಿಚಾರ ಹಾಗು ಹಬ್ಬ ಹರಿದಿನಗಳ ಮಹತ್ವವನ್ನು ತಿಳಿಯಪಡಿಸಿ ಅವರನ್ನು ಹಬ್ಬಗಳಲ್ಲಿ ತನ್ಮಯತೆಯಿಂದ, ಭಕ್ತಿ ಭಾವದಿಂದ ತೊಡಗಿಕೊಳ್ಳುವಂತೆ ಮಾಡುವುದಕ್ಕೆ ಸಿಕ್ಕ ಸುವರ್ಣಾವಕಾಶವೆಂದರೆ ತಪ್ಪಿಲ್ಲ, ಆದರೆ ಅದೇಕೋ ಇತ್ತೀಚಿನ ದಿನಗಳಲ್ಲಿ ರಜೆಯೆಂದರೆ ಮುಂದಿನ ತರಗತಿಗಳ ಪಾಠಗಳನ್ನು ಒಂದು ವರುಷದ ಮುಂಚೆಯೇ ಪಾಠ ಹೇಳಿ ಮುಗಿಸುವ ಪರಿಪಾಠಗಳು ಹಾಗು ಸಮ್ಮರ್ ಕ್ಯಾಂಪ್ ಎಂಬ ಹೆಸರಿನಲ್ಲಿ ಮಕ್ಕಳಿಗೆ ಮತ್ತೆ ಮತ್ತೆ ಮೆಕ್ಯಾನಿಕಲ್ ಲೈಫ್‌ಗೆ ದೂಡುವ ಪರಿಪಾಠಗಳು ಎಗ್ಗಿಲ್ಲದೆ ನಡೆಯುತ್ತಿದೆ. ಆ ಎಳೆಯ ಮನಸ್ಸುಗಳಿಗೆ ಪಾಠದಷ್ಟೇ ಆಟ, ಸಂಸ್ಕೃತಿ, ಆಚಾರ ವಿಚಾರವು ಬಹು ಮುಖ್ಯ ಎಂಬುದನ್ನು ನಾವುಗಳು ಮರೆಯುತ್ತಿದ್ದೇವೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಚಿಕ್ಕಂದಿನಲ್ಲೇ ನಮ್ಮ ಸನಾತನ ಧರ್ಮದ ಮಹತ್ವವನ್ನು ಹಾಗು ಸತ್ವವನ್ನು ಮಕ್ಕಳಿಗೆ ಹಬ್ಬ ಹರಿದಿನಗಳ ಮೂಲಕ ಮಕ್ಕಳನ್ನೂ ಒಳಗೊಂಡಂತೆ ಆಚರಿಸಿ ರಜೆಯ ಸಮಯದಲ್ಲಿ ಅಲ್ಪ ಸ್ವಲ್ಪವಾದರು ಬ್ರಾಹ್ಮಣನಾದವನ ಕರ್ತವ್ಯಗಳು ಹಾಗು ಅವುಗಳ ಆಚರಣೆ ಇವೆಲ್ಲವುಗಳನ್ನು ತಮ್ಮ ದೈನಂದಿನ ಜೀವನದ ಭಾಗವಾಗುವಂತೆ ರೂಢಿಸಿಕೊಳ್ಳಲು ಸಿಕ್ಕ ಸುವರ್ಣಾವಕಾಶ ಎಂಬುದನ್ನು ಅರಿತು ಮಕ್ಕಳ ಭವಿಷ್ಯವು ಸುಂದರವಾಗಿಸಲು ಸನಾತನ ಸಂಸ್ಕೃತಿಯ ಅಡಿಪಾಯ ಹಾಕಿ ಹಿಂದುಸ್ತಾನದ ಹೆಮ್ಮೆಯ ಪ್ರಜೆಗಳಾಗಲು ವೇದಿಕೆ ಸಿದ್ದಮಾಡಿಕೊಡಬೇಕು ಆ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯ ಪ್ರವೃತ್ತರಾಗುವತ್ತ ಯೋಚಿಸಬೇಕಾಗಿರುವುದು ಈ ಹೊತ್ತಿನ ಆದ್ಯ ಕರ್ತವ್ಯವಾಗಿದೆ ಎಂದರೆ ನೀವೆಲ್ಲರೂ ಒಪ್ಪುತ್ತೀರೆಂದೇ ಭವಿಸಿದ್ದೇನೆ.

ಅದಲ್ಲದೆ ಕಳೆದ ಎರಡುವರೆ ವರ್ಷಗಳಿಂದ ನಾನಾ ವಿಪ್ರ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು, ಕಾರ್ಯಕರ್ತರನ್ನು ಅವರ ಕಾರ್ಯ ವೈಖರಿಯನ್ನು ಹತ್ತಿರದಿಂದ ನೋಡಿ ತಿಳಿಯುವ ಹಾಗು ಕೇಳಿ ತಿಳಿಯುವ ಅವಕಾಶ ನನ್ನದಾಗಿದೆ, ಹೀಗೆ ನಾನಾ ಸಂಘ ಸಂಸ್ಥೆಗಳನ್ನು ಗಮನಿಸಿದಾಗ ಕಂಡು ಬಂದದ್ದು ಕೆಲವು ಸಂಘ ಸಂಸ್ಥೆಗಳು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದರೂ ಆ ಬಗೆಯಲ್ಲಿ ಬೆಳವಣಿಗೆ ಕಾಣಲು ವಿಫಲವಾದದ್ದು ಹಾಗು ಕೆಲವೊಂದು ಸಂಘ ಸಂಸ್ಥೆಗಳು ಎಲ್ಲರೂ ನಿಬ್ಬೆರಗಾಗುವಂತೆ ಅಘಾದವಾಗಿ ಬೆಳೆದು ನಿಂತದ್ದು ಎರಡನ್ನು ಕಾಣಬಹುದು. ಹೀಗೇಕೆ ಎಂದು ಕಂಡುಕೊಂಡಾಗ ಸಾಮಾನ್ಯವಾಗಿ ಸಫಲವಾದ ಅಥವಾ ಮಹತ್ತರವಾದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಸಂಘ ಸಂಸ್ಥೆಗಳ ಬೆಳವಣಿಗೆಗೆ ಕಾರಣವಾದದ್ದು ಒಂದು ಕಾಮನ್ ಆಬ್ಜೆಕ್ಟಿವ್ ಅದೇಂದರೆ ಎಲ್ಲರನ್ನು ಒಳಗೊಂಡ ನಿಸ್ವಾರ್ಥ ಸೇವಾ ಮನೋಭಾವ ಅದೇರೀತಿ ಬೆಳವಣಿಗೆಯನ್ನು ಕಾಣದ ಸಂಘ ಸಂಸ್ಥೆಗಳತ್ತ ಕಣ್ಣಾಯಿಸಿದಾಗ ಕಂಡು ಬಂದದ್ದು ನಾವು ಎಂಬ ಮನೋಭಾವಕ್ಕಿಂತ ನಾನು ಎಂಬ ಮನೋಭಾವ, ಅಂದರೆ ಸಂಘ ಸಂಸ್ಥೆಗಳಲ್ಲಿ ಯಾರು ಹೆಚ್ಚು ಅಲ್ಲ ಹಾಗು ಯಾರು ಕಡಿಮೆಯೂ ಅಲ್ಲ ಎಂಬ ಮನೋಭಾವದಿಂದ ಎಲ್ಲರೂ ಕೈ ಜೋಡಿಸಿ ಒಟ್ಟಾಗಿ ಮುನ್ನಡೆದ ಎಲ್ಲ ಸಂಸ್ಥೆಗಳು ಯಶಸ್ಸನ್ನು ಕಂಡಿವೆ ಈ ವಿಷಯವನ್ನು ಒಂದು ಸೂಕ್ತ ಉದಾಹರಣೆಯೊಂದಿಗೆ ಇನ್ನಷ್ಟು ಮನದಟ್ಟಾಗುವಂತೆ ಹೇಳಬಹುದು. ಒಮ್ಮೆ ದೇಹದ ನಾನಾ ಅವಯವಗಳು ನಮ್ಮಲಿ ಶ್ರೇಷ್ಠರಾರು ಎಂಬ ಪ್ರಶ್ನೆ ಮುಂದಿಟ್ಟವಂತೆ, ಕಾಲುಗಳು ದಿನ ನಿತ್ಯದ ಕೆಲಸಗಳಲ್ಲಿ ನನ್ನನ್ನು ಬಿಟ್ಟು ಏನನ್ನು ಮಾಡಲು ಸಾಧ್ಯವಿಲ್ಲ ಆದ್ದರಿಂದ ನಾನೆ ಶ್ರೇಷ್ಠ ಎಂದಿತಂತೆ, ಅದೇ ರೀತಿ ಕೈ ತನ್ನ ಮಹತ್ವವನ್ನು ಸಾರಿತು, ಕಣ್ಣುಗಳು ತನ್ನ ಮಹತ್ವವನ್ನು ಸಾರಿತು, ಮೆದಳು ನನ್ನ ಯೋಚನಾ ಶಕ್ತಿಯಿಂದಲೇ ಇಂದು ವೀವೆಲ್ಲರೂ ಈ ವಿಷಯವನ್ನು ತರ್ಕಿಸಲು ಸಾಧ್ಯವಾಗಿದ್ದು ಎಂದು ತನ್ನ ಮಹತ್ವವನ್ನು ಸಾರಿತು ಕೀಗೆ ದೇಹದ ನಾನಾ ಅವಯವಗಳು ತಮ್ಮ ತಮ್ಮ ಮಹತ್ವವನ್ನು ಸಾರುತ್ತ ಕೊನೆಗೆ ಎಲ್ಲ ಅಂಗಗಳು ಮಹತ್ವವಾದದ್ದೇ ಆದರೆ ಈ ಹೊಟ್ಟೆ ಎಂಬುದಿದೆ ನೋಡಿ ಇದು ನಾವೆಲ್ಲ ಇಷ್ಟು ಕೆಲಸವನ್ನು ಮಾಡಿದರು ಇದು ಮಾತ್ರ ಏನೇನನ್ನು ಮಾಡದೆ ಆರಾಮಾಗಿದೆ ಎಂಬ ನಿರ್ಣಯಕ್ಕೆ ಬಂದವಂತೆ ಹಾಗು ಹೊಟ್ಟೆಯನ್ನು ಇನ್ನಿಲದಂತೆ ದ್ವೇಷಿಸಬೇಕೆಂದು ಠರಾವು ಹೊರಡಿಸಿದವಂತೆ, ಈ ವಿಷಯ ಹೇಗೋ ಹೊಟ್ಟೆಗೂ ತಿಳಿದು ಇವುಗಳಿಗೆ ಬುದ್ಧಿ ಕಲಿಸಬೇಕೆಂದು ಹೊಟ್ಟೆ ಆಹಾರವನ್ನು ಪಚನವಾಗುವ ಪ್ರಕ್ರಿಯಲ್ಲಿ ಪಾಲ್ಗೊಳ್ಳಲೇ ಇಲ್ಲ, ಈ ವಿಷಯ ದೇಹದ ಇತರೆ ಅವಯವಗಳಿಗೂ ತಿಳಿದು ಅವುಗಳು ಕೂಡ ಒಂದು ರೀತಿಯ ಸಂಪನ್ನು ಹೂಡಿದವಂತೆ, ಹೀಗೆ ದೇಹದ ಎಲ್ಲ ಅವಯವಗಳು ತಮ್ಮ ತಮ್ಮ ಕೆಲಸವನ್ನು ನಿಲ್ಲಿಸಿದಾಗ, ತಾವು ಆಶ್ರಯ ಪಡೆದುಕೊಂಡಿದ್ದ ದೇಹ ಒಟ್ಟಾರೆಯಾಗಿ ದಿನ ಕಳೆದಂತೆ ಕೃಶವಾಗುತ್ತ ಹೋಯಿತಂತೆ ಅಂದರೆ ನಮ್ಮ ಸಂಘ ಸಂಸ್ಥೆಗಳ ಪರಿಸ್ಥಿತಿಯು ಇದೆ, ಯಾವಾಗ ನಮ್ಮಲಿ ನಾವೇ ಶ್ರೇಷ್ಠರು ಅಥವಾ ನಮ್ಮಿಂದಲೇ ಎಲ್ಲಾ ಎಂಬ ಮನೋಭಾವ ಮನೆ ಮಾಡುತ್ತದೋ ಆಗ ಅದು ನಮ್ಮನು ಗೆಲುವಿನ ಬಾಗಿಲಿನಿಂದ ಹಂತ ಹಂತವಾಗಿ ದೂರವಾಗಿಸುತ್ತ ಹೋಗುತ್ತದೆ, ಅಂದರೆ ಒಟ್ಟಾರೆಯಾಗಿ ಹೇಳ ಹೊರಟ್ಟಿದ್ದು ಸಂಘ ಸಂಸ್ಥೆಗಳಲ್ಲಿ ಎಷ್ಟು ನಿಸ್ವಾರ್ಥ ಮನೋಭಾವದಿಂದ ತೊಡಗಿಸಿಕೊಳ್ಳುತೇವೆಯೋ ಅಷ್ಟಷ್ಟು ಸಂಘ ಸಂಸ್ಥೆಗಳು ಉನ್ನತಿಯನ್ನು ಕಾಣುತ್ತವೆ ಹಾಗು ಅದನ್ನು ನೆಚ್ಚಿಕೊಂಡ ಸಮುದಾಯವು ಕೂಡ ಅಭ್ಯುದಯ ಕಾಣುತ್ತದೆ.

ಅದಲ್ಲದೆ ಕಳೆದ ಸಾಲಿನಿಂದ ಹಾಸ್ಯ ದಿಗ್ಗಜ ಹಾಗು ಮಹಾಸಭೆಯ ಪ್ರಪ್ರಥಮ ಅಧ್ಯಕ್ಷರಾಗಿದ್ದ ಕೀರ್ತಿ ಶೇಷ ಮಾಸ್ಟರ್ ಹಿರಣ್ಣಯ್ಯ ಅವರ ಸವಿ ನೆನಪಿನಲ್ಲಿ ಹಾಸ್ಯೋತ್ಸವ ಕಾರ್ಯಕ್ರಮ ಹಾಗು ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹಾನ್ ಸಾಹಿತಿಗಳಿಗೆ ಗೌರವಿಸುವ ಪರಿಪಾಠವನ್ನು ಮಹಾಸಭೆ ಪ್ರಾರಂಭಿಸಿದೆ. ಈ ನಿಟ್ಟಿನಲ್ಲಿ ಈ ಬಾರಿ ಏಪ್ರಿಲ್ ಹತ್ತರಂದು ನಡೆದ ಹಾಸ್ಯೋತ್ಸವ ಕಾರ್ಯಕ್ರಮದಲ್ಲಿ ಮಹಾಸಭೆ ಹಾಸ್ಯ ಸಾಹಿತಿ ಶ್ರೀ ಎಂ.ಎಸ್. ನರಸಿಂಹಮೂರ್ತಿ ಅವರಿಗೆ ಹಾಸ್ಯ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ **"ಹಾಸ್ಯ ಸಾಹಿತ್ಯ ವಿಭೂಷಣ"** ಎಂಬ ಬಿರುದನ್ನು ನೀಡಿ ಗೌರವಿಸಿದೆ. ಕಳೆದ ವರುಷ ಈ ಗೌರವ ಶ್ರೀಯುತ ಆ.ರಾ.ಮಿತ್ರವರಿಗೆ ಸಂದಿತ್ತು ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಮುಂದಿನ ದಿನಗಳಲ್ಲಿಯೂ ಕೂಡ ವಿಪ್ರ ಸಮುದಾಯ ಇದೇ ರೀತಿ ಸಾಹಿತ್ಯ ಸೇವೆಯಲ್ಲಿ ತೊಡಗಿಕೊಳ್ಳಲಿ ಎಂದು ಆಶಿಸುತ್ತಾ ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ವಿವರಗಳೊಂದಿಗೆ ಮತ್ತೆ ಭೇಟಿಯಾಗೋಣ.

**ಅಶೋಕ ಹಾರನಹಳ್ಳಿ,**
ಅಧ್ಯಕ್ಷರು,

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ಇದೀಗ ಕೇಂದ್ರ ಸರ್ಕಾರವು ಗೃಹ ಇಲಾಖೆಯು ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ದೇಶಾದ್ಯಂತ ಜಾರಿಗೊಳಿಸಿದೆ. ಭಾರತೀಯ ಸಂಸತ್‌ನಲ್ಲಿ ಅನುಮೋದನೆ ಆದ ನಾಲ್ಕು ವರ್ಷಗಳ ನಂತರ ಈ ಕಾಯ್ದೆ ಜಾರಿಯಾಗುತ್ತಿದೆ. ಪಾಕಿಸ್ತಾನ, ಆಫ್ಘಾನಿಸ್ತಾನ ಮತ್ತು ಬಾಂಗ್ಲಾ ದೇಶಗಳಲ್ಲಿ ನಡೆದ ಧಾರ್ಮಿಕ ಕಿರುಕುಳದಿಂದ ಬೇಸತ್ತು ಭಾರತಕ್ಕೆ ಓಡಿಬಂದ ಆರು ಮತಧರ್ಮ ಅಲ್ಪಸಂಖ್ಯಾತರಿಗೆ ಈ ಕಾಯ್ದೆ ಪೌರತ್ವ ನೀಡುತ್ತಿದೆ. ಹಿಂದೂ, ಸಿಖ್, ಬೌದ್ಧ, ಪಾರ್ಸಿ ಮತ್ತು ಕ್ರಿಶ್ಚಿಯನ್ ಅವರೇ ಈ ಧರ್ಮೀಯರು.

ಡಿಸೆಂಬರ್ 31, 2014ರ ಒಳಗೆ ಅಥವಾ ಅದಕ್ಕೂ ಮೊದಲು ಆ ಮೂರು ದೇಶಗಳಿಂದ ನಮ್ಮ ದೇಶವನ್ನು ಪ್ರವೇಶಿದವರಿಗೆ ಪೌರತ್ವ ನೀಡಲಾಗುವುದು. ಈ ಕಾಯ್ದೆಗೆ ಮೊದಲು ಭಾರತೀಯ ಪೌರತ್ವ ದೊರಕಬೇಕಾದರೆ ಅಂತಹವರು ಹನ್ನೊಂದು ವರ್ಷ ಕಾಯಬೇಕಾಗಿತ್ತು. ಈ ತಿದ್ದುಪಡಿಯಿಂದ ಲಕ್ಷಾಂತರ ಜನರಿಗೆ ಅನುಕೂಲವಾಗಲಿದೆ. ಪಾಕಿಸ್ತಾನ, ಆಫಾನಿಸ್ತಾನ ಮತ್ತು ಬಾಂಗ್ಲಾ ದೇಶಗಳಲ್ಲಿ ಅಲ್ಪಸಂಖ್ಯಾತರಿಗೆ ನೀಡಿದ್ದ ಕಾರಣ ಭಾರೀ ಧಾರ್ಮಿಕ ಕಿರುಕುಳದಿಂದ ಈ ಮೂರು ದೇಶಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರವು ವಿವರಿಸಿದೆ.

ಅಸ್ಸಾಂ, ಮೇಘಾಲಯ, ಮಿಜೋರಾಂ ಮತ್ತು ತ್ರಿಪುರಾದಲ್ಲಿ ವಾಸಿಸುತ್ತಿರುವ ಬುಡಕಟ್ಟು ಪ್ರದೇಶದ ಜನರಿಗೆ ಈ ಕಾಯ್ದೆ ಅನ್ವಯವಾಗುವುದಿಲ್ಲ. ಕೇಂದ್ರ ಸರ್ಕಾರವು ಅವರನ್ನು ಭಾರತೀಯರು ಎಂದೇ ಪರಿಗಣಿಸಲಾಗುತ್ತದೆ. ಆದರೆ ನಮ್ಮ ನೆರೆದೇಶದವರಾದ ಮ್ಯಾನ್ಮಾರ್, ಶ್ರೀಲಂಕಾ ಮತ್ತು ಆಫ್ಘಾನಿಸ್ತಾನದಿಂದ ಬಹಳಷ್ಟು ಜನರು ವೀಸಾ ಮೇಲೆ ಬಂದು ಇಲ್ಲಿ ನೆಲಸಿದ್ದಾರೆ. ಅಂತವರು ಸಿಎಎ ಅಡಿಯಲ್ಲಿ ಅರ್ಜಿ ಸಲ್ಲಿಸಬೇಕಿಲ್ಲ. ಆ ದೇಶಗಳಲ್ಲಿ ಪರಿಸ್ಥಿತಿ ಸರಿಹೋದ ಮೇಲೆ ಅಂತಹವರು ತಮ್ಮ ದೇಶಗಳಿಗೆ ಹಿಂತಿರುಗಬಹುದು. ಸಿಎಎ ಜಾರಿಯಾಗುವ ಮೂರು ದೇಶಗಳಲ್ಲಿ ಮುಸಲ್ಮಾನರು ಬಹುಸಂಖ್ಯಾತರಾಗಿದ್ದಾರೆ.

ಅಂತಹ ಕೆಲವರು ಇಲ್ಲಿ ಬಂದು ನೆಲಸಿದ್ದಾರೆ. ಅಲ್ಲಿನ ಪರಿಸ್ಥಿತಿ ಸರಿ ಹೋದ ಮೇಲೆ ಅವರು ಹಿಂತಿರುಗಬಹುದು. ಅಥವಾ ಅಲ್ಲಿ ಪ್ರತಿಕೂಲ ಸ್ಥಿತಿ ಮುಂದುವರೆದರೆ ನಮ್ಮ ದೇಶದಲ್ಲಿ ಶಾಶ್ವತವಾಗಿ ನೆಲಸಲು ಕೇಂದ್ರ ಸರ್ಕಾರವು ಭವಿಷ್ಯದಲ್ಲಿ ಕಾನೂನನ್ನು ರೂಪಿಸಬೇಕಾಗಿದೆ. ಸಿಎಎ ಇಡೀ ಪ್ರಕ್ರಿಯೆ ಆನ್‌ಲೈನ್‌ನಲ್ಲಿದೆ. ಗೃಹ ಸಚಿವಾಲಯವು ಅರ್ಜಿದಾರರ ಅನುಕೂಲಕ್ಕಾಗಿ ಒಂದು ವಿಶೇಷ ಪೋರ್ಟಲ್ ಅನ್ನು ಸಿದ್ಧಪಡಿಸಿದೆ. ಅರ್ಜಿದಾರರು ತಾವು ಭಾರತ ಪ್ರವೇಶಿಸಿದ ವರ್ಷವನ್ನು ಆ ಆನ್‌ಲೈನ್ ಅರ್ಜಿಯಲ್ಲಿ ಘೋಷಿಸಬೇಕಾಗುತ್ತದೆ. ಯಾವುದೇ ಪ್ರಯೋಗ ದಾಖಲೆಗಳ ಅಗತ್ಯವಿರುವುದಿಲ್ಲ.

2019ರಲ್ಲಿ ಸಿಎಎ ಅನ್ನು ಜಾರಿಗೊಳಿಸಲು ಪ್ರಯತ್ನಿಸಿದಾಗ ಸಂಸತ್‌ನಲ್ಲಿ ಮತ್ತು ದೇಶಾದ್ಯಂತ ಭಾರೀ ಪ್ರತಿರೋಧ ವ್ಯಕ್ತವಾಗಿತ್ತು. ಈ ಬಗ್ಗೆ ಕೆಲವು ಪೊಳ್ಳು ಸೆಕ್ಯುಲರ್‌ವಾದಿಗಳು, ತಥಾಕಥಿತ ಬುದ್ಧಿಜೀವಿಗಳು ಆಕ್ರೋಶ ವ್ಯಕ್ತಪಡಿಸಿದ್ದರು. ಈ ಕಾಯ್ದೆ ಜಾರಿಯ ಔಚಿತ್ಯವನ್ನು ಪ್ರಶ್ನಿಸಿದ್ದರು. ಅವೆಲ್ಲಕ್ಕೂ ಕೇಂದ್ರ ಸರ್ಕಾರವು ಸಮರ್ಪಕ ಉತ್ತರವನ್ನು ನೀಡಿತ್ತು. ಇದಕ್ಕಾಗಿ 1935ರ ಭಾರತೀಯ ನಾಯಕ ಪೌರತ್ವ ಕಾಯ್ದೆಗೆ ತಿದ್ದುಪಡಿ ಮಾಡಲಾಗಿತ್ತು.. ಈ ಕಾಯ್ದೆಯಿಂದಾಗಿ ಹಲವು ಧರ್ಮೀಯರ ರಕ್ಷಣೆ ಉಂಟಾಗುತ್ತದೆ ಎಂಬ ಆಶಾಭಾವನೆ ಇದೆ. ಮುಂಬರುವ ವರ್ಷಗಳಲ್ಲಿ ಈ ಕಾಯ್ದೆಯ ಫಲವನ್ನು ನಿರೀಕ್ಷಿಸಬಹುದು.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
ಪ್ರಧಾನ ಸಂಪಾದಕರು

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**
**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**
**ಸ್ಥಳ : ಗಾಯತ್ರಿ ಭವನ**
**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**
**ಬನಶಂಕರಿ 2ನೆ ಹಂತ, ಬೆಂಗಳೂರು-70.**
**ದೂರವಾಣಿ : 080-26770066/26771695**
**ಸಮಯ : ಸಂಜೆ 5.00 ರಿಂದ 7.00 ರವರೆಗೆ**
**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**
**ಮೊ. : 9916325902**

**ಸದಸ್ಯರು**
**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**
**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

# ಯಗಟಿಯಲ್ಲಿ ಬ್ರಾಹ್ಮಣ ಸಂಘದ ಸೇವಾದೀಕ್ಷೆ ಹಾಗೂ ಸಾಧಕರಿಗೆ ಸನ್ಮಾನ
# ರಾಜ್ಯ ಸರ್ಕಾರ ಸ್ವೀಕರಿಸಿರುವ ಜಾತಿ ಗಣತಿ ವರದಿ ವೈಜ್ಞಾನಿಕವಾಗಿಲ್ಲ

**– ಅಶೋಕ ಹಾರನಹಳ್ಳಿ,**





ಕಡೂರು: ರಾಜ್ಯ ಸರ್ಕಾರವು ಸ್ವೀಕರಿಸಿರುವ ಜಾತಿ ಗಣತಿ ವರದಿ ವೈಜ್ಞಾನಿಕವಾಗಿಲ್ಲ, ಇದರಲ್ಲಿ ಬ್ರಾಹ್ಮಣರ ಸಂಖ್ಯೆಯನ್ನು ಕಡಿಮೆ ತೋರಿಸಿದ್ದು ಈ ಕುರಿತು ಬ್ರಾಹ್ಮಣ ಮಹಾಸಭಾ ಹೋರಾಟ ನಡೆಸಲಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಹೇಳಿದರು.

ತಾಲ್ಲೂಕಿನ ಯಗಟಿ ಗ್ರಾಮದ ಶ್ರೀ ವೀರನಾರಾಯಣಸ್ವಾಮಿ ದೇವಾಲಯದ ಆವರಣದಲ್ಲಿ ವಿಪ್ರ ಸಮಾಜ, ವೀರನಾರಾಯಣಸ್ವಾಮಿ ದೇವಾಲಯ ಅಭಿವೃದ್ಧಿ ಸಮಿತಿ, ಶ್ರೀ ಕಲ್ಲೇಶ್ವರಸ್ವಾಮಿ ದೇವಾಲಯ ಅಭಿವೃದ್ಧಿ ಸಮಿತಿ ಸಂಯುಕ್ತಾಶ್ರಯದಲ್ಲಿ ಭಾನುವಾರ ನಡೆದ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ನೊಂದಣಿಗೆ ಚಾಲನೆ, ಯಗಟಿ ವಿಪ್ರ ಸಮಾಜದ ನೂತನ ಪದಾಧಿಕಾರಿಗಳ ಸೇವಾ ದೀಕ್ಷೆ, ಸಮಾಜದ ಸಾಧಕರು ಮತ್ತು ಹಿರಿಯರಿಗೆ ಗೌರವದ ಸಮರ್ಪಣೆ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ರಾಜ್ಯದಾದ್ಯಂತ ಮಹಾಸಭಾದ ಪದಾಧಿಕಾರಿಗಳಿಂದ ತಾವು ವರದಿ ತರಿಸಿಕೊಂಡಿದ್ದು ಜಾತಿ ಗಣತಿ ಸಮೀಕ್ಷೆ ಎಲ್ಲಿಯೂ ನಿರ್ದಿಷ್ಟವಾಗಿ ಕೈಗೊಂಡಿಲ್ಲ, ಸುಮಾರು 45 ಲಕ್ಷ ಇರುವ ಬ್ರಾಹ್ಮಣರ ಸಂಖ್ಯೆಯನ್ನು ಕೇವಲ 14 ಲಕ್ಷ ಎಂದು ವರದಿಯಲ್ಲಿ ತಿಳಿಸಿರುವುದು ಬೇಸರದ ಸಂಗತಿ, ಈ ವರದಿಯನ್ನು ಇತರೆ ಕೆಲವು ಜಾತಿಯ ಜನರು ಹೇಗೆ ವಿರೋಧಿಸುತ್ತಿದ್ದಾರೋ ಹಾಗೇಯೆ ಬ್ರಾಹ್ಮಣ ಸಮಾಜವು ವಿರೋಧಿಸುತ್ತದೆ ಎಂದರು.

ಎಲ್ಲಾ ಸಮುದಾಯದ ಸಹಕಾರ ಬ್ರಾಹ್ಮಣ ಸಮುದಾಯಕ್ಕೆ ಇದೆ. ಇತಿಹಾಸದಲ್ಲಿ ಕೆಲವು ತಪ್ಪುಗಳು ನಡೆದು ಹೋಗಿವೆ. ಅಸ್ಪ್ರಶ್ಯತೆಯನ್ನು ಇವತ್ತು ಯಾವ ಕಾಲಕ್ಕೂ ಒಪ್ಪಲಿಕ್ಕೆ ಸಾಧ್ಯವಿಲ್ಲ, ಕಾಲ ಬದಲಾಗಿದೆ. ಕೆಲವು ವಿಚಾರಗಳನ್ನು ಕೈಬಿಟ್ಟು ಮುಂದೆ ಹೋಗಿದ್ದೇವೆ. ಧರ್ಮ ಶಾಸ್ತ್ರದಲ್ಲಿ ತಿಳಿಸಿರುವ ಅನೇಕ ವಿಚಾರಗಳು ಇಂದಿಗೆ ಪ್ರಸ್ತುತವಿಲ್ಲ. ಭೂಸುಧಾರಣೆ ಕಾನೂನಿನಲ್ಲಿ ಬ್ರಾಹ್ಮಣರ ಅನೇಕ ಕೃಷಿ ಭೂಮಿ ಹೊರಟು ಹೋಯಿತು. ಕೃಷಿಯನ್ನೇ ನಂಬಿಕೊಂಡು ಬಂದ ಬ್ರಾಹ್ಮಣ ಕುಟುಂಬಗಳು ಇದರಿಂದ ಬೀದಿಗೆ ಬಂದವು ಎಂದು ಹೇಳಿದರು. ಕಾಲಕಾಲಕ್ಕೆ ಉಂಟಾದ ಎಲ್ಲಾ ಬದಲಾವಣೆಗಳನ್ನು ಒಪ್ಪಿಕೊಂಡು ಮೀಸಲಾತಿಯನ್ನು ವಿರೋಧಿಸದೆ ಸಾಗಿ ಬಂದ ಬ್ರಾಹ್ಮಣ ಸಮುದಾಯದ ಮೇಲೆ ದೂಷಣೆ ಮಾಡುವ ಪ್ರವೃತ್ತಿ ಕೆಲವು ವರ್ಗಗಳಿಂದ ನಡೆಯುತ್ತದೆ ಎಂದು ಬೇಸರ ವ್ಯಕ್ತಪಡಿಸಿದ ಅವರು ಸಂಖ್ಯಾಬಲವಿಲ್ಲದ ಈ ಸಮುದಾಯ ಬುದ್ಧಿ ಶಕ್ತಿಯನ್ನೇ ನಂಬಿ ಬದುಕುತ್ತಿದೆ. ದಕ್ಷಿಣ ಕನ್ನಡದಲ್ಲಿ ಬ್ರಾಹ್ಮಣ ಸಮುದಾಯದ ಹೆಣ್ಣು ಮಕ್ಕಳನ್ನೇ ಗುರಿಯಾಗಿಟ್ಟುಕೊಂಡು ನೋವಿನ ಸಂಗತಿ ಎಂದು ವಿಷಾದಿಸಿ ಲವ್ ಜಿಹಾದ್ ಎಂಬ ಅಪಾಯಕಾರಿ ಸಂಸ್ಕೃತಿ ಈ ಸಮುದಾಯವನ್ನು ಕಾಡಿದೆ ಎಂದರು.

ಭಾರತ ಜಾತ್ಯತೀತ ರಾಷ್ಟ್ರ ಎಂದು ಸಂವಿಧಾನದಲ್ಲಿಯೇ ಹೇಳಲಾಗಿದೆ. ಆದರೆ ಹಿಂದೂ ಧರ್ಮವೇ ಜಾತ್ಯತೀತ. ಇದಕ್ಕೆ ಉದಾಹರಣೆ ಎಂದರೆ ಹಿಂದೂ ಧರ್ಮದೊಳಗೆ ಎಲ್ಲಾ ಧರ್ಮಗಳು ಸೇರಿವೆ. ಧರ್ಮವನ್ನೇ ನಂಬಿಕೊಂಡು ಬ್ರಾಹ್ಮಣ ಸಮುದಾಯ ಬದುಕುತ್ತಿದೆ. ಸನಾತನ ಧರ್ಮದ ಅಂಶಗಳನ್ನು ಅಳವಡಿಸಿಕೊಂಡು ಬದುಕುವುದೇ ನಿಜವಾದ ಧರ್ಮ. ಕೆಲವು ಪಕ್ಷಗಳು ಬ್ರಾಹ್ಮಣ ವಿರೋಧಿ ತತ್ವಗಳನ್ನೇ ಮುಂದಿಟ್ಟುಕೊಂಡು ಅಧಿಕಾರ ನಡೆಸುತ್ತಿರುವುದು ಸರಿಯಲ್ಲ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ವೈ.ಎಸ್.ವಿ ದತ್ತ ಮಾತನಾಡಿ ಜಾತಿ ವ್ಯವಸ್ಥೆಯ ಇಂದಿನ ರಾಜಕಾರಣದಲ್ಲಿ ಹಾರನಹಳ್ಳಿ ರಾಮಸ್ವಾಮಿ ಅವರು ತಮಗೆ ಮಾದರಿ ಆಗಿದ್ದಾರೆ. ಅವರು ಅರಸೀಕೆರೆ ಕ್ಷೇತ್ರದ ಶಾಸಕರಾಗಿದ್ದರು. ಅದೇ ರೀತಿ ಕಡೂರು ಕ್ಷೇತ್ರದಲ್ಲಿ ತಮ್ಮನ್ನು ಈ ಹಿಂದೆ ಅತ್ಯಧಿಕ ಮತಗಳನ್ನು ನೀಡಿ ಗೆಲ್ಲಿಸಿದ್ದರು. ಎಲ್ಲರನ್ನೂ ಒಪ್ಪಿಕೊಂಡು, ಎಲ್ಲರನ್ನೂ ಅಪ್ಪಿಕೊಂಡು ಸಾಗುವ ಮನೋಭಾವವೇ ಜಾತ್ಯತೀತ ಕಲ್ಪನೆ ಎಂದು ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಾಧ್ಯಮ ಘಟಕದ ರಾಜ್ಯ ಸಂಚಾಲಕ ಯಗಟಿ ಮೋಹನ್ ಅಭಿನಂದನಾ ನುಡಿ ನುಡಿದರು. ಎಂ.ಬಿ.ಬಿ.ಎಸ್. ಪದವಿಯಲ್ಲಿ ರ್‍ಯಾಂಕ್ ಪಡೆದ ಕುಮಾರಿ ವೈ.ಆರ್. ಅನನ್ಯ ಅವರನ್ನು ಅಭಿನಂದಿಸಲಾಯಿತು. ಯಗಟಿ ಹೋಬಳಿಯ ನೂತನ ಪದಾಧಿಕಾರಿಗಳಿಗೆ ಸೇವಾ ದೀಕ್ಷೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಪಿ.ಎಸ್. ಕೃಷ್ಣಮೂರ್ತಿ, ಪಿ. ಮಂಜುನಾಥ ಜೋಷಿ, ಜೆ.ಎ. ನಾಗರಾಜ್, ಶ್ರೀನಿವಾಸ್, ವೈಎಸ್. ರವಿಪ್ರಕಾಶ್ ಮುಂತಾದವರು ಉಪಸ್ಥಿತರಿದ್ದರು.

# ಶಿವಮೊಗ್ಗದಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಹಾಲಿ ಸಂಸದರಾದ ಶ್ರೀ ಬಿ.ವೈ ರಾಘವೇಂದ್ರ ಅವರಿಗೆ ಅಭಿನಂದನಾ ಸಮಾರಂಭ



ಶಿವಮೊಗ್ಗ ನಗರದಲ್ಲಿ ವಿಪ್ರ ಸ್ನೇಹ ಬಳಗದ ಆಶ್ರಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿಎಸ್ ಯಡಿಯೂರಪ್ಪನವರಿಗೆ ಮತ್ತು ಹಾಲಿ ಸಂಸದರಾದ ಶ್ರೀ ಬಿ.ವೈ ರಾಘವೇಂದ್ರ ಅವರಿಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಶಾಸಕರಾದ ಚನ್ನಬಸಪ್ಪ ಅವರು ಮತ್ತು ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿಯವರು ಅಭಿನಂದನಾ ಭಾಷಣವನ್ನು ಮಾಡಿದರು ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರು ಮತ್ತು ಜಿಲ್ಲಾ ಬ್ರಾಹ್ಮಣ ಸಭೆಯ ಅಧ್ಯಕ್ಷರಾದ ನಟರಾಜ ಭಾಗವತ್ ಮತ್ತು ಬ್ರಾಹ್ಮಣ ಸಂಘಗಳ ನೇತೃತ್ವದಲ್ಲಿ ಈ ಸಮಾರಂಭ ನಡೆಯಿತು.

# ರಾಷ್ಟ್ರೀಯತೆ–ಸನಾತನ ಧರ್ಮ ರಕ್ಷಿಸುವವರನ್ನು ಬೆಂಬಲಿಸಿ

**– ಅಶೋಕ ಹಾರನಹಳ್ಳಿ,**

ರಾಷ್ಟ್ರೀಯತೆ ಹಾಗೂ ಸನಾತನ ಧರ್ಮವನ್ನು ರಕ್ಷಿಸುವ ಪಕ್ಷ ಹಾಗೂ ವ್ಯಕ್ತಿಗಳನ್ನು ಬೆಂಬಲಿಸುವಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಹೇಳಿದರು.

ಗಾಯತ್ರಿ ಮಾಂಗಲ್ಯ ಮಂದಿರದಲ್ಲಿ ವಿಪ್ರ ಸ್ನೇಹ ಒಕ್ಕೂಟ (40ಕ್ಕೂ ಅಧಿಕ ಬ್ರಾಹ್ಮಣ ಸಂಘ–ಸಂಸ್ಥೆಗಳ ಒಕ್ಕೂಟ) ವತಿಯಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರನ್ನು ಅಭಿನಂದಿಸಿ ಮಾತನಾಡಿದರು.

ಗಂಡುಮೆಟ್ಟಿನ ನೆಲವಾದ ಶಿವಮೊಗ್ಗದಿಂದ ರಾಜ್ಯಕ್ಕೆ ಒಂದು ಸಂದೇಶ ಹೋಗುವ, ರವಾನೆಯಾಗುವ ಅವಶ್ಯವಿದೆ. ಬ್ರಾಹ್ಮಣರು ಸನಾತನ ಧರ್ಮವನ್ನು ರಕ್ಷಣೆ ಮಾಡುವವರಿಗೆ ಬೆಂಬಲ ನೀಡಿದ್ದಾರೆಯೇ ಹೊರತು ಜಾತಿಯನ್ನು ಗಮನಿಸಿಲ್ಲ. ಸನಾತನ ಧರ್ಮವನ್ನು ಕೀಳಿರಿಮೆಯಿಂದ ನೋಡಲಾಗುತ್ತಿದೆ. ಯಾರು ಸನಾತನ ಧರ್ಮ, ರಾಷ್ಟ್ರೀಯ ಭಾವನೆಗಳು ಹಾಗೂ ಹಿಂದುಗಳ ರಕ್ಷಣೆ ಮಾಡುತ್ತಾರೋ ಅವರನ್ನು ಬೆಂಬಲಿಸುವ ಸಂದೇಶ ಹೋಗಬೇಕಿದೆ ಎಂದರು.

ರಾಮಮಂದಿರ ನಿರ್ಮಾಣದಿಂದ ಬಹಳ ದೊಡ್ಡ ಬದಲಾವಣೆಯಾಗಿದೆ. ಭಾರತ ವಿಶ್ವ ಗುರುವಾಗಲು ದೇಶಕ್ಕೆ ಮೋದಿ ನೇತೃತ್ವ ಅಗತ್ಯವಾಗಿದೆ ಎಂದರಲ್ಲದೆ. ಆರ್ಥಿಕ ತಜ್ಞ ಮಾಜಿ ಪ್ರಧಾನಿ ಶ್ರೀ ಪಿ.ವಿ. ನರಸಿಂಹರಾಯರಿಗೆ "ಭಾರತ ರತ್ನ" ನೀಡಲು ಮೋದಿಯೇ ಬರಬೇಕಾಯಿತು ಎಂದು ತಿಳಿಸಿದರು.

ತಮ್ಮ ಜೀವನವನ್ನು ಸಾರ್ವಜನಿಕ ಕ್ಷೇತ್ರಕ್ಕೆ ಸಮರ್ಪಿಸಿಕೊಂಡಿರುವ ಬಿ.ಎಸ್. ಯಡಿಯೂರಪ್ಪನವರು ನಾಡು ಕಂಡ ಧೀಮಂತ ನಾಯಕ. ಬ್ರಾಹ್ಮಣ ಸಮಾಜ ಸೇರಿದಂತೆ ಎಲ್ಲಾ ವರ್ಗಗಳ ಸಮಾಜಕ್ಕೆ ಆರ್ಥಿಕ ಶಕ್ತಿ ತುಂಬಿದ್ದಾರೆ. ಅವರಿಗೆ ಗೌರವ ಕೊಡುವುದು ಎಂದರೇ ನಮಗೆ ನಾವೇ ಗೌರವಿಸಿಕೊಂಡಂತೆ ಎಂದ ಅವರು ಸಂಸದ ಬಿ.ವೈ. ರಾಘವೇಂದ್ರ ಕೂಡ ತಂದೆಯಂತೆ ಹಿಡಿದ ಕೆಲಸವನ್ನು ಬಿಡದೆ ಮಾಡುವ ಉತ್ಸಾಹಿ, ಕ್ರಿಯಾಶೀಲ ವ್ಯಕ್ತಿ ಎಂದರು.

# ಸಾರಸ್ವತ ಲೋಕದ ವಿದ್ವತ್ ಮುಕುಟ 'ಶತಾವಧಾನಿ ಆರ್.ಗಣೇಶ್' ಅವರಿಗೆ ಗೌರವ ಡಾಕ್ಟರೇಟ್




ದಿನಾಂಕ 07/03/2024 ರಂದು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಪ್ರಥಮ ಘಟಿಕೋತ್ಸವದಲ್ಲಿ ಸಾರಸ್ವತ ಲೋಕದ ವಿದ್ವತ್ ಮುಕುಟ ಶತಾವಧಾನಿ ಡಾ. ಆರ್. ಗಣೇಶ್ ಅವರಿಗೆ ಮಾನನೀಯ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿದರು.

ನಮ್ಮ ರಾಜ್ಯದ ಹೆಮ್ಮೆ, ನಮ್ಮ ದೇಶದ ಆಸ್ತಿ ವಿದ್ವತ್ ಲೋಕದ ವಿಸ್ಮಯ ಎಂದೇ ಹೆಸರಾಗಿರುವ ಶತಾವಧಾನಿ ಡಾ. ಆರ್. ಗಣೇಶ್ ಅವರಿಗೆ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಪ್ರಥಮ ಘಟಿಕೋತ್ಸವದಲ್ಲಿಯೇ ಈ ಗೌರವ ಸಂದಿರುವುದು ಒಂದೆಡೆ ಸಾರಸ್ವತ ಲೋಕವೇ ಹೆಮ್ಮೆಪಡುವಂತಾಗಿದೆ, ಇದೇ ವೇಳೆ ಗೌರವ ಡಾಕ್ಟರೇಟ್ ಪಡೆದುಕೊಂಡ ಪ್ರೊ.ಪಿ.ಕೆ. ಮಾಧವನ್ (ಕೇರಳ) ಪ್ರೊಲೀನಾ ರಸ್ತೋಗಿ (ಮಹಾರಾಷ್ಟ್ರ), ಪ್ರೊ. ಗಯಾ ಚರಣ್ ತ್ರಿಪಾಠಿ (ಉತ್ತರ ಪ್ರದೇಶ), ಪ್ರೊ. ದೇವಿಸಹಾಯ ಪಾಂಡೆ (ಉತ್ತರಪ್ರದೇಶ) ಇವರಿಗೂ ಸಹ ಮಹಾಸಭೆ ಅಭಿನಂದಿಸುತ್ತದೆ.

# ಡಾ|| ಸುಧಾಮೂರ್ತಿ ರಾಜ್ಯಸಭೆಗೆ ಸದಸ್ಯೆಯಾಗಿ ನಾಮಕರಣ

ಸಮಾಜಸೇವೆಯಲ್ಲಿ ಗುರುತಿಸಿಕೊಂಡಿರುವ ಪ್ರಸಿದ್ಧ ಲೇಖಕಿ ಹಾಗೂ ಇನ್‌ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಶ್ರೀಮತಿ ಸುಧಾಮೂರ್ತಿ ರಾಜ್ಯಸಭೆ ಸದಸ್ಯರಾಗಿ ರಾಷ್ಟ್ರಪತಿಯವರಿಂದ ನಾಮನಿರ್ದೇಶಿತಗೊಂಡಿದ್ದಾರೆ. ಈ ಕುರಿತು ಪ್ರಧಾನಿಮಂತ್ರಿ ನರೇಂದ್ರ ಮೋದಿಯವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮೂಲಕ ಮಾಹಿತಿ ಹಂಚಿಕೊಂಡಿದ್ದಾರೆ.

ಕಲೆ, ಸಾಹಿತ್ಯ, ವಿಜ್ಞಾನ, ಕ್ರೀಡೆ, ಸಮಾಜಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ರಾಜ್ಯಸಭೆಗೆ 12 ಸದಸ್ಯರನ್ನು ಕೇಂದ್ರ ಸರ್ಕಾರದ ಶಿಫಾರಸಿನಂತೆ ರಾಷ್ಟ್ರಪತಿ ನೇರವಾಗಿ ನಾಮನಿರ್ದೇಶನ ಮಾಡುತ್ತಾರೆ. ಪ್ರಸ್ತುತ ರಾಜ್ಯಸಭೆಯಲ್ಲಿ ನಾಮನಿರ್ದೇಶಿತ ಸದಸ್ಯರ ಪೈಕಿ ಒಂದು ಸ್ಥಾನ ಖಾಲಿ ಉಳಿದಿತ್ತು. ದೇಶದ ಐಟಿ ದಿಗ್ಗಜ ಸಂಸ್ಥೆ ಇನ್ಫೋಸಿಸ್ ಸಹ ಸಂಸ್ಥಾಪಕ ಶ್ರೀ ನಾರಾಯಣಮೂರ್ತಿ ಅವರ ಪತ್ನಿ ಡಾ. ಸುಧಾಮೂರ್ತಿ ಅವರು ಲೇಖಕಿಯಾಗಿಯೂ ಕೂಡ ಛಾಪು ಮೂಡಿಸಿದ್ದಾರೆ. ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಸುಧಾಮೂರ್ತಿಯವರ ಅಳಿಯ. 2023ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. 2006ರಲ್ಲಿಯೇ ಇವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿತ್ತು.



ಡಾ. ಶ್ರೀಮತಿ ಸುಧಾಮೂರ್ತಿಯವರು ರಾಜ್ಯಸಭೆಗೆ ನಾಮಕರಣಗೊಂಡಿರುವುದಕ್ಕೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪರವಾಗಿ ಹಾಗೂ ವೈಯಕ್ತಿಕವಾಗಿ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ – ಯೋಗ ಶಿಬಿರ



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಯೋಗ ಶಿಬಿರವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಮಹಿಳಾ ಘಟಕ ಹಾಗೂ ಪತಂಜಲಿ ಯೋಗ ಸಮಿತಿ ಸಂಯುಕ್ತ ಆಶ್ರಯದಲ್ಲಿ 10–03–2024 ರಿಂದ 17–03–2024 ವರೆಗೆ ಹಮ್ಮಿಕೊಳ್ಳಲಾಗಿತ್ತು. ಯೋಗ ಶಿಬಿರದ ಉದ್ಘಾಟನೆಯ ಕಾರ್ಯಕ್ರಮವನ್ನು ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ನೆರವೇರಿಸಲಾಯಿತು.


ಜಾಹಿರಾತು

**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

ಶುಭಾಶಯಗಳೊಂದಿಗೆ



ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336

**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ಎ.ಕೆ. | ನಿರ್ದೇಶಕರು | | |

# ಗೌರವ ಸಮರ್ಪಣೆ



ಮೈಸೂರು ವಿಶ್ವ ವಿದ್ಯಾಲಯದ 104 ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪುರಸ್ಕೃತರಾದ ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಖ್ಯಾತ ಸಂಸ್ಕೃತ–ಆಗಮ ವಿದ್ವಾಂಸರಾದ ಪ್ರೊ. ಭಾಷ್ಯ ಸ್ವಾಮೀಜಿರವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ನಂ. ಶ್ರೀಕಂಠಕುಮಾರ್, ಕೆ.ಆರ್. ಯೋಗಾ ನರಸಿಂಹನ್, ಕೆ.ಆರ್. ಸತ್ಯನಾರಾಯಣ, ಶಂಕರನಾರಾಯಣ, ಎಂ. ವೆಂಕಟೇಶ್, ಡಾ.ಲಕ್ಷ್ಮೀದೇವಿ, ಸೌಭಾಗ್ಯಮೂರ್ತಿ, ಹೇಮಲತಾ, ಶಾಂತ ಸೋಮಶೇಖರ್‌ರವರು ಗೌರವಿಸಿದರು. ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಇದ್ದರು.

# ಕರಸೇವಕರಿಗೆ ಅಭಿನಂದನೆ

ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘ ಮತ್ತು ಶ್ರೀ ಶಕ್ತಿ ಗಣಪತಿ ಸೇವಾ ಮಂಡಳಿ ಟ್ರಸ್ಟ್ ವತಿಯಿಂದ ದಿನಾಂಕ: 14.02.2024, ಬುಧವಾರದಂದು ಅಯೋಧ್ಯೆ ಶ್ರೀ ರಾಮ ಮಂದಿರಕ್ಕಾಗಿ ಹೋರಾಡಿದ ಕರಸೇವಕರಿಗೆ ಅಭಿನಂದನಾ ಸಮಾರಂಭ ಹಾಗೂ ಗಣಪತಿ, ನವಗ್ರಹ, ಸುಬ್ರಮಣ್ಯ ಮತ್ತು ಆಂಜನೇಯ ಹೋಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀಮತಿ ಶಾರದಾ ಸುಬ್ರಹ್ಮಣ್ಯ ಹಾಗೂ ಮುಖ್ಯ ಅತಿಥಿಗಳಾಗಿ ಆಡೆನ್ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಶ್ರೀ.ರಾಮಣ್ಣ ರವರು, ಅಖಿಲ ಕರ್ನಾಟಕ ಭಜನಾ ಪರಿಷತ್‌ನ ಅಧ್ಯಕ್ಷರಾದ ಶ್ರೀ. ಮುರಳೀಧರ ಶರ್ಮಾ ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕುಮಾರ್ ಪ್ರಶಸ್ತಿ ಪತ್ರವನ್ನು ಓದಿ, ಗಣ್ಯರಿಂದ ಕರ ಸೇವಕರಿಗೆ ಪತ್ರಗಳನ್ನು ವಿತರಿಸಲಾಯಿತು.



## ದಾವಣಗೆರೆಯಲ್ಲಿ ಆತ್ಮೀಯ ಸನ್ಮಾನ



ಇತ್ತೀಚೆಗೆ, ದಾವಣಗೆರೆ ಬ್ರಾಹ್ಮಣ ಸಂಘದ ಅಧ್ಯಕ್ಷರಾದ **ಡಾ|| ಶಶಿಕಾಂತ್** **ಹಾಗೂ ಅವರ ಧರ್ಮಪತ್ನಿ ಡಾ|| ಶ್ರೀಮತಿ ಶಶಿರೇಖರವರನ್ನು** ದಾವಣಗೆರೆಯ ಶಾರದಾ ಸಂಗೀತ ಹಾಗೂ ನೃತ್ಯ ಕಲಾ ಶಾಲೆಯವರು ಆತ್ಮೀಯವಾಗಿ ಸನ್ಮಾನಿಸಿದರು.

## ಕಲಬುರಗಿಯಲ್ಲಿ ಯುವ ಚಿಂತಕರ ಸಭೆ

ಕಲಬುರಗಿಯಲ್ಲಿ ಯುವ ಚಿಂತಕರ ಸಭೆ 2024: ಎಕೆಬಿಎಂಎಸ್‌ಗೆ ಗ್ರ್ಯಾಂಡ್ ಸಕ್ಸಸ್ ದಿ ಯಂಗ್ ಥಿಂಕರ್ಸ್ 2024 ಕಾರ್ಯಕ್ರಮವು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ಎಕೆಬಿಎಂಎಸ್) ಕಲಬುರ್ಗಿಯಲ್ಲಿ ಆಯೋಜಿಸಿದ್ದು, ಅದ್ಭುತ ಯಶಸ್ಸನ್ನು ಕಂಡಿದೆ. ಈ ಕಾರ್ಯಕ್ರಮವು ಬ್ರಾಹ್ಮಣ ಮಹಾ ಸಭಾದ ಯುವಕರಿಗೆ ವಿಶೇಷವಾಗಿ ಉಪಚರಿಸಲ್ಪಟ್ಟಿತು, ಅವರು ಅದನ್ನು ನಡೆಸಿದ ರೀತಿಗೆ ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದರು. ಈವೆಂಟ್ ಯುವ ಪಾಲ್ಗೊಳ್ಳುವವರಿಗೆ ಂಏಃಒಖ ನ ಚಟುವಟಿಕೆಗಳ ಒಳನೋಟಗಳನ್ನು ಪಡೆಯಲು ಒಂದು ಅಮೂಲ್ಯವಾದ ವೇದಿಕೆಯನ್ನು ಒದಗಿಸಿತು. ಎಕೆಬಿಎಂಎಸ್ ಮಹತ್ವದ ಪ್ರಭಾವವನ್ನು ಬೀರುವ ಸಾಮರ್ಥ್ಯವನ್ನು ಹೊಂದಿದೆ ಎಂದು ಅನೇಕ ಭಾಗವಹಿಸುವವರು ಭಾವಿಸಿದರು ಮತ್ತು ಯುವಜನರು ಹೆಚ್ಚು ಸಾಮಾಜಿಕವಾಗಿ ಜವಾಬ್ದಾರಿಯುತರಾಗಲು ಪ್ರೇರೇಪಿಸಿದರು. ಯುವಕರು ಪ್ರದರ್ಶಿಸುವ ಉತ್ಸಾಹವು ಎಕೆಬಿಎಂಎಸ್ ತಂಡಕ್ಕೆ ಉಜ್ವಲ ಭವಿಷ್ಯವನ್ನು ನೀಡುತ್ತದೆ. ಸಭೆಯಲ್ಲಿ 60+ ಜನರು ಭಾಗವಹಿಸಿದ್ದರು.

ಎಕೆಬಿಎಂಎಸ್ ಅಧ್ಯಕ್ಷರಾದ ಶ್ರೀ ಅಶೋಕ್ ಹಾರ್ನಳ್ಳಿ ಅವರ ಅಮೂಲ್ಯವಾದ ಬೆಂಬಲ ಮತ್ತು ಮಾರ್ಗದರ್ಶನಕ್ಕಾಗಿ ಸಂಘಟಕರು ತಮ್ಮ ಪ್ರಾಮಾಣಿಕ ಕೃತಜ್ಞತೆಯನ್ನು ಸಲ್ಲಿಸುತ್ತಾರೆ.


ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

## ಸ್ಥಳದ ಬಾಡಿಗೆ ಇರುವುದಿಲ್ಲ

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080-26793054 ಮೊಬೈಲ್ 8277433666**

# ಹಿರಿಯ ವೇದ–ಶಾಸ್ತ್ರ–ಸಂಸ್ಕೃತ ವಿದ್ವಾಂಸರಿಗೆ 'ವೇದ/ಶಾಸ್ತ್ರವಿದ್ಯಾನಿಧಿ' ಪ್ರಶಸ್ತಿ ಪ್ರದಾನ



**ಮೈಸೂರು** : "ವೇದಶಾಸ್ತ್ರ ಉಳಿಸಬೇಕಾದ ಹೊಣೆ ನಮ್ಮೆಲ್ಲರದಾಗಿದೆ" ಎಂದು ಸಂಸ್ಕೃತ ವಿದ್ವಾಂಸ ಡಾ. ಟಿ.ವಿ. ಸತ್ಯನಾರಾಯಣ ಹೇಳಿದರು.

ನಗರದ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಇತ್ತೀಚೆಗೆ ವೇದಶಾಸ್ತ್ರ ಪೋಷಿಣೀ ಸಭಾದಿಂದ ನಡೆದ ಶತೋತ್ತರ ಸಂಭ್ರಮ, ವಿದ್ವಾಂಸರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

'ಎಲ್ಲ ವೇದಶಾಸ್ತ್ರಗಳು ಭಾರತದಲ್ಲಿ ಜನ್ಮ ತಾಳಿವೆ ಎನ್ನುವುದು ಸಂತೋಷದ ವಿಷಯ. ವಿದೇಶಿ ವಿದ್ವಾಂಸರು ಆಧುನಿಕವಾದ ಸಂಶೋಧನೆ ಮಾಡಿದ್ದೇವೆ ಎಂದು ಹೇಳುತ್ತಾರೋ ಅವೆಲ್ಲವೂ ನಮ್ಮ ಶಾಸ್ತ್ರದಲ್ಲಿ ಅಡಗಿತ್ತು. ಅಂತಹ ವೇದ, ಶಾಸ್ತ್ರಗಳನ್ನು ಸಂರಕ್ಷಣೆ ಮಾಡಿದವರು ವಿದ್ವಾಂಸರು. ಅಂತಹವರನ್ನು ಸ್ಮರಿಸುವುದು ನಮ್ಮ ಕರ್ತವ್ಯ" ಎಂದು ಹೇಳಿದರು.

ನವದೆಹಲಿಯ ಡಾ.ಪರಮೇಶ್ವರ ನಾರಾಯಣ ಶಾಸ್ತ್ರಿ, ಶೃಂಗೇರಿಯ ಹೆಚ್.ಎಸ್. ಶ್ರೀನಿವಾಸಮೂರ್ತಿ ಭಟ್, ಗೋಕರ್ಣದ ಕೃಷ್ಣ ಮಾರ್ಣೇಶ್ವರ ಜೋಗ ಭಟ್ಟ, ಸಾಗರದ ವಿದ್ವಾಂಸ ಪುಟ್ಟಯ್ಯ ನಾರಾಯಣ ಭಟ್ಟ, ಮೈಸೂರಿನ ವಿದ್ವಾನ್ ಕೆ.ಆರ್. ಮಂಜುನಾಥ ಶ್ರೌತೀ, ಮಂಗಳೂರಿನ ವಿದ್ವಾಂಸ ಡಾ.ಗೋಪಾಲಕೃಷ್ಣ ಭಟ್ಟ, ಬೆಂಗಳೂರಿನ ಡಾ. ಶ್ರೀಧರ್ ಮೇಲುಕೋಟೆ ಕೆ, ಉಡುಪಿಯ ವಿದ್ವಾನ್ ಡಾ. ಎಚ್. ಲಕ್ಷ್ಮೀನಾರಾಯಣ ಭಟ್ಟ, ಬೆಂಗಳೂರಿನ ಡಾ. ಎ. ರಾಮಸ್ವಾಮಿ ಅಯ್ಯಂಗಾರ್, ಶಿರಸಿಯ ವಿದ್ವಾಂಸ ಎಚ್.ಸಿ. ಬಾಲಚಂದ್ರ ಶಾಸ್ತ್ರಿ, ಧಾರವಾಡದ ವಿದ್ವಾನ್ ಮಧುಸೂಧನ ಶಾಸ್ತ್ರಿ ಹಂಪೀಹೊಳಿ, ವಿದ್ವಾನ್ ಡಾ. ಎಸ್.ರಂಗನಾಥ್, ರಾಜರಾಜೇಶ್ವರಿ ಜೋಶಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸನ್ಮಾನಿತರ ಪರವಾಗಿ ಎಸ್. ವ್ಯಾಸ ಯೋಗ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ: ಎಂ.ಕೆ. ಶ್ರೀಧರ್ ಮಾತನಾಡಿ, 103 ವರ್ಷಗಳಷ್ಟು ಹಳೆಯದಾದ ಶ್ರೀ ವೇದಶಾಸ್ತ್ರ ಪೋಷಿಣೀ ಸಭಾದ ಸಮಾಜಮುಖಿ ಕಾರ್ಯಕ್ರಮಗಳನ್ನು ಪ್ರಶಂಸಿಸಿ "ವೇದ–ಶಾಸ್ತ್ರಗಳು ಭಾರತೀಯ ಸನಾತನ ಜ್ಞಾನ–ವಿಜ್ಞಾನಗಳ ಚಿರಂತನ ಚಿಲುಮೆ ಹಾಗೂ ಆಸ್ತಿ. ಅವುಗಳನ್ನು ಮುಂದಿನ ಪೀಳಿಗೆಗೆ ರಕ್ಷಿಸಬೇಕಾದ ಹೊಣೆಗಾರಿಕೆ ಎಲ್ಲ ಪ್ರಜ್ಞಾವಂತ ನಾಗರಿಕರದು" ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವೇದಶಾಸ್ತ್ರ ಪೋಷಿಣೀ ಸಭಾ ಅಧ್ಯಕ್ಷರಾದ ಪ್ರೊ: ಬಿ.ಎನ್. ನಾಗರಾಜ ಭಟ್, ಕಾರ್ಯದರ್ಶಿ ವಿದ್ವಾನ್ ಎ.ಎಂ. ಚಂದ್ರಶೇಖರ್, ವಿದ್ವಾಂಸರೂ ಮತ್ತು ಸದಸ್ಯರಾದ ಡಾ. ಎನ್. ಸುಬ್ರಹ್ಮಣ್ಯ ಭಟ್ಟ, ಹೇರಂಬ ಆರ್. ಭಟ್ಟ, ಕೆ. ರಮೇಶ್ ಅಡಿಗ, ವಿಶ್ವನಾಥ ಅಗ್ನಿಹೋತ್ರಿ, ವೆಂಕಟರಮಣ ಭಟ್ಟ, ಚಿದಂಬರ ಭಟ್ಟ, ಶ್ರೀಪಾದ ಭಟ್ಟ ಮುಂತಾದವರು ಉಪಸ್ಥಿತರಿದ್ದರು.


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ದಾವಣಗೆರೆಗೆ ಪೇಜಾವರ ಶ್ರೀಗಳ ಭೇಟಿ




ಇತ್ತೀಚೆಗೆ ಪೇಜಾವರ ಶ್ರೀಗಳು ದಾವಣಗೆರೆಗೆ ಆಗಮಿಸಿದ ಸಂದರ್ಭದಲ್ಲಿ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಶ್ರೀಕಾಂತ್ ಹಾಗೂ ಸತ್ಯನಾರಾಯಣ ಮತ್ತಿತರ ಪದಾಧಿಕಾರಿಗಳು ಆಶೀರ್ವಾದ ಪಡೆದರು.


**ಜಾಹಿರಾತು**

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)

ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

ಮೊ : 944 26771695

## ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ

ಹೆಸರು : ____________________

ವಿಳಾಸ ____________________

____________________

ಸದಸ್ಯತ್ವದ ಸಂಖ್ಯೆ : ____________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

**ಚಂದಾದಾರರ ಸಹಿ/–**

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301l
FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

# ಪೇಜಾವರ ಶ್ರೀಗಳಿಗೆ ಅದ್ದೂರಿ ಸ್ವಾಗತ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ದಕ್ಷಿಣ ಕನ್ನಡ ವತಿಯಿಂದ, 16.03.2024 ರಂದು ಅಯೋಧ್ಯೆಯಲ್ಲಿ ಶ್ರೀರಾಮದೇವರ ಪ್ರತಿಷ್ಠಾಪನೆ ಮತ್ತು 48 ದಿನಗಳ ಮಂಡಲೋತ್ಸವವನ್ನು ವೈಭವದಿಂದ ನೆರವೇರಿಸಿ ಉಡುಪಿಗೆ ಮರಳುತ್ತಿರುವ ಶ್ರೀ ಪೇಜಾವರ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರನ್ನು ಮಂಗಳೂರು ವಿಮಾನ ನಿಲ್ದಾಣದಲ್ಲಿ ಆದರಪೂರ್ವಕವಾಗಿ ಸ್ವಾಗತಿಸಿದ ಸುಂದರ ಕ್ಷಣ. ತದನಂತರ ಮೆರವಣಿಗೆ ಸಮೇತ ಅವರೊಂದಿಗೆ ಶ್ರೀ ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನ ಹಾಗೂ ಮುಲ್ಕಿ ಬಪ್ಪನಾಡು ದೇವಸ್ಥಾನಗಳಿಗೆ ಭೇಟಿ ನೀಡಿ, ಸ್ವಾಗತಿಸಿ, ಅವರನ್ನು ಉಡುಪಿಗೆ ಗೌರವಪೂರ್ವಕವಾಗಿ ಬೀಳ್ಕೊಡಲಾಯಿತು.

# ಬಾಗೇಪಲ್ಲಿಯ ಬ್ರಾಹ್ಮಣ ಸಭಾದಿಂದ – ವಿಪ್ರ ಸಾಧಕರಿಗೆ ಸನ್ಮಾನ



ಬಾಗೇಪಲ್ಲಿ ತಾಲೂಕು ಬ್ರಾಹ್ಮಣ ಸಭಾದಿಂದ ದಿನಾಂಕ 17.03.24ರಂದು, ವೇದಮಾತೆ ಗಾಯತ್ರಿ ದೇವಿಯ 19ನೇ ವರ್ಷದ ಪ್ರತಿಷ್ಠಾಪನಾ ಮಹೋತ್ಸವ ಹಾಗೂ ಪ್ರತಿಭಾನ್ವಿತ ವಿಪ್ರ ಸಾಧಕರಿಗೂ ಸನ್ಮಾನ ಅದ್ದೂರಿಯಾಗಿ ನೆರವೇರಿತು. ತಾಲ್ಲೂಕು ಸಂಘದ ಅಧ್ಯಕ್ಷರಾದ ಮುನಿರಾಮಯ್ಯ, ಜಿಲ್ಲಾ ಸಭಾದ ಅಧ್ಯಕ್ಷರಾದ ಶ್ರೀ ನಾಗಭೂಷಣರಾವ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯ ಸಹ ಕಾರ್ಯದರ್ಶಿ ಶ್ರೀ ಪ್ರಕಾಶ್ ಪಿ.ಆರ್, ಕಾರ್ಯಕಾರಿಣಿ ಸದಸ್ಯರಾದ ಶ್ರೀ ರಘುವೀರ ಶರ್ಮ ಹಾಗೂ ತಾಲ್ಲೂಕಿನ ಸಭಾದ ಎಲ್ಲ ಸದಸ್ಯರು, ವಿಪ್ರ ಮುಖಂಡರು ಉಪಸ್ಥಿತರಿದ್ದರು.

# ದಕ್ಷಿಣ ಕನ್ನಡ ತಾಲ್ಲೂಕು ಸಮಿತಿ ಸಭೆ



ತಾ. 15.03.2024 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ದಕ್ಷಿಣ ಕನ್ನಡ ತಾಲ್ಲೂಕು ಸಮಿತಿ ಸಭೆಯನ್ನು ಜಿಲ್ಲಾ ಪ್ರಧಾನ ಸಂಚಾಲಕರಾದ ಶ್ರೀ ಶ್ರೀಧರ ಹೊಳ್ಳ ಇವರ ಸಂಚಾಲಕತ್ವದಲ್ಲಿ ಹಮ್ಮಿಕೊಳ್ಳಲಾಯಿತು. ಸಭೆಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಪೊಳಲಿ ಗಿರಿ ಪ್ರಕಾಶ್ ತಂತ್ರಿ ಹಾಗೂ ರಾಜ್ಯ ಸಹ ಕಾರ್ಯದರ್ಶಿ ಚೇತನಾ ದತ್ತಾತ್ರೇಯ ಉಪಸ್ಥಿತರಿದ್ದರು. ಸಭೆಗೆ ಲೋಕಸಭಾ ಅಭ್ಯರ್ಥಿ ಕ್ಯಾಪ್ಟನ್ ಬ್ರಿಜೇಶ್ ಚೌಟ ಭೇಟಿ ನೀಡಿ ಮಾತನಾಡಿದರು, ಹಾಗೂ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೋರ್ವರ ಸಹಕಾರವನ್ನು ಯಾಚಿಸಿದರು. ಮಹಾಸಭಾದ ರಾಜ್ಯ, ಜಿಲ್ಲಾ ಹಾಗೂ ಮಂಗಳೂರು ತಾಲ್ಲೂಕು ಸಮಿತಿಗೆ ಆಯ್ಕೆಗೊಂಡ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸಭೆಯಲ್ಲಿ ಕೈಗೊಂಡ ನಿರ್ಧಾರಗಳು :

1) ಮಂಗಳೂರಿನ, ವಿವಿಧ ಬ್ರಾಹ್ಮಣ ಸಮಾಜದ ಆಯ್ಕೆಗೊಂಡ ಮುಖ್ಯಸ್ಥರು ಸದಸ್ಯರ ಪಟ್ಟಿಯನ್ನು ನಮಗೆ ಶೀಘ್ರದಲ್ಲಿ ಒಪ್ಪಿಸುವುದು. ಅರ್ಜಿಯ ನಮೂನೆಯನ್ನು ಉಪಾಧ್ಯಕ್ಷರ ಬಳಿ ಚರ್ಚಿಸಿ ಎರಡು ದಿನದಲ್ಲಿ ಗ್ರೂಪ್ ನಲ್ಲಿ ಹಾಕಲಾಗುವುದು.

2) ನಮ್ಮೊಂದಿಗೆ ಬ್ರಾಹ್ಮಣ ಸಮಾಜಗಳು ಜಂಟಿಯಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಒಂದು ಕಾರ್ಯಕ್ರಮ ಕಡ್ಡಾಯವಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಹಯೋಗದೊಂದಿಗೆ ಹಮ್ಮಿಕೊಳ್ಳತಕ್ಕದ್ದು.

3) ಮಹಾಸಭಾದ ಸದಸ್ಯತನವನ್ನು ಪಡೆದು ತಮ್ಮ ತಮ್ಮ ಸಮಾಜದಲ್ಲಿ ಮಹಾಸಭಾ ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳುವುದು.

4) ಮಹಾಸಭಾದ ಧ್ಯೇಯ ಉದ್ದೇಶಗಳನ್ನೊಳಗೊಂಡ ಕರಪತ್ರವನ್ನು ತಯಾರಿಸಿ ಬ್ರಾಹ್ಮಣ ಸಮಾಜದಲ್ಲಿ ಹಂಚುವುದು.

5) ಮಂಗಳೂರಿನ ಪ್ರತಿಷ್ಠಿತ ಆಸ್ಪತ್ರೆ, ವಿದ್ಯಾಲಯ, ಕಾಲೇಜು, ಹೋಟೆಲ್ ಇತ್ಯಾದಿಗಳೊಂದಿಗೆ ಮಾತನಾಡಿ ಬ್ರಾಹ್ಮಣ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೌಲಭ್ಯಗಳನ್ನು ಒದಗಿಸಲು ವಿನಂತಿ ಮಾಡಲು ನಿರ್ಧರಿಸಲಾಯಿತು.

# ವೇದಾಧ್ಯಯನ ಪಾಠ ಆರಂಭ



ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ವೇದ ಬ್ರಹ್ಮ ಶ್ರೀ ಶಂಕರನಾರಾಯಣ ಶಾಸ್ತ್ರಿಗಳ ನೇತೃತ್ವದಲ್ಲಿ ವೇದ ಅಧ್ಯಯನ ಪಾಠ ಪ್ರಾರಂಭವಾಯಿತು. ಸಮಾಜದ ಅಧ್ಯಕ್ಷರಾದ ಡಾಕ್ಟರ್ ಶಶಿಕಾಂತ್ ರವರು ಅಧ್ಯಯನ ಮಾಡಲು ಬಂದ ವಿಪ್ರರಿಗೆ ವೇದ ಪಾಠಕ್ಕೆ ತಪ್ಪದೆ ಬರಬೇಕೆಂದು ಮನವಿ ಮಾಡಿದರು, ಶ್ರೀಯುತ ಪಿಜಿ ನಿರಂಜನ್ ರವರು ಗುರುಗಳಾದ ಶ್ರೀಯುತ ಶಂಕರನಾರಾಯಣ ಶಾಸ್ತ್ರಿಯವರ ಪರಿಚಯವನ್ನು ಸಂಕ್ಷಿಪ್ತವಾಗಿ ವಿವರಿಸಿದರು. ವಾರದಲ್ಲಿ ಎರಡು ದಿನ ಪ್ರತಿ ಬುಧವಾರ ಮತ್ತು ಗುರುವಾರ ಸಂಜೆ 6ರಿಂದ 7 ರವರೆಗೆ ವೇದಾಧ್ಯಯನ ಪಾಠ ನಡೆಯುತ್ತದೆ ಎಂದು ತಿಳಿಸಲಾಯಿತು.

## ಯುವ ಚಿಂತಕರ ಸಭೆಯಲ್ಲಿ ಮಹಾಸಭೆಯ ವಲಯ ಉಪಾಧ್ಯಕ್ಷ ಶ್ರೀಧರ್ ಸರಾಫ್ ಹೇಳಿಕೆ

# ವಿಪ್ರರು ಸ್ವಯಂ ಉದ್ಯೋಗದತ್ತ ಚಿತ್ತ ಹರಿಸುವುದು ಅಗತ್ಯ




ಕಲುಬುರ್ಗಿ : ವಿಪ್ರರು ಹೆಚ್ಚಾಗಿ ನೌಕರಿಯನ್ನೇ ನಂಬಿ ಬದುಕು ದುಸ್ತರ ಮಾಡಿಕೊಂಡಿರುವುದು ಎಲ್ಲರಿಗೂ ಗೊತ್ತಿರುವಂಥದ್ದೇ. ಇನ್ನಾದರೂ ಸಮಾಜದ ಯುವಕರು ಸ್ವಯಂ ಉದ್ಯೋಗದತ್ತ ಚಿತ್ತ ಹರಿಸುವುದು ಅಗತ್ಯ ಮತ್ತು ಅನಿವಾರ್ಯತೆ ಇದೆ. ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಶ್ರೀ ಶ್ರೀಧರ್ ಸರಾಫ್ ಹೇಳಿದರು.

ನಗರದ ಜಗತ್ ವೃತ್ತದಲ್ಲಿನ ಕನ್ನಡ ಸಾಹಿತ್ಯ ಸಂಘದಲ್ಲಿ ಶನಿವಾರ ಆಯೋಜಿಸಿದ್ದ ಯುವ ಚಿಂತಕರ ಸಭೆಯಲ್ಲಿ ಅವರು ಮಾತನಾಡಿದರು. ಇಂದು ವಿಪ್ರರಿಗೆ ಸರ್ಕಾರಿ ಉದ್ಯೋಗ ಸಿಗುವುದು ಕಷ್ಟಸಾಧ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಬ್ರಾಹ್ಮಣ ವಿದ್ಯಾರ್ಥಿ–ಯುವಜನರು ವಿದ್ಯಾಭ್ಯಾಸದಲ್ಲಿ ಸಾಧನೆ ಮಾಡುತ್ತಿಲ್ಲ. ಆರ್ಥಿಕ ಸಮಸ್ಯೆಯಿಂದಾಗಿ ಮಕ್ಕಳನ್ನು ಓದಿಸಲಾಗದ ಸ್ಥಿತಿಯಲ್ಲಿ ನಾವಿದ್ದೇವೆ. ಹೀಗಾಗಿ ಸ್ಪರ್ಧಾತ್ಮಕ ಯುಗದಲ್ಲಿ ನಮ್ಮ ಸಮಾಜದ ಯುವಕರು ಉದ್ಯೋಗವಿಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ. ಯುವಜನತೆ ಅನುಭವಿಸುತ್ತಿರುವ ಸಮಸ್ಯೆ ಅರಿತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಯುವಕರನ್ನು ಉದ್ಯೋಗದಲ್ಲಿ ತೊಡಗಿಸುವ ನಿಟ್ಟಿನಲ್ಲಿ ಯುವ ಚಿತಂತಕರ ಸಭೆ ಆಯೋಜಿಸಲಾಗಿದೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲೂ ಸಭೆ ನಡೆಸಿ ಯುವಕರಲ್ಲಿ ಉದ್ಯೋಗದ ಬಗ್ಗೆ ಆಸಕ್ತಿ ಮೂಡಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ವಿಪ್ರ ಸಮಾಜದ ಯುವಕ, ಯುವತಿಯರು ಸ್ವಯಂ ಉದ್ಯೋಗ ಮಾಡಲು ಮುಂದೆ ಬರಬೇಕು ಎಂಬ ಉದ್ದೇಶವನ್ನು ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರಹಳ್ಳಿರವರು ಹೊಂದಿದ್ದಾರೆ. ಪ್ರತಿ ಜಿಲ್ಲೆಯಿಂದ ಹತ್ತು ಯುವಕರಾದರೂ ಉದ್ಯಮಿಗಳಾಗಬೇಕು. ಹತ್ತಾರು ಜನರಿಗೆ ಉದ್ಯೋಗ ಕೊಡಬಲ್ಲರು. ನಿರುದ್ಯೋಗ ಸಮಸ್ಯೆ ನಿವಾರಸಲು ಸಾಧ್ಯ ಎಂದರು.



ಬ್ರಾಹ್ಮಣ ಸಮಾಜದ ಬಗ್ಗೆ ಯುವಕರಲ್ಲಿರುವ ಅಭಿಪ್ರಾಯ ಸಂಗ್ರಹ ಮಾಡಬಹುದಾದ ಉದ್ಯೋಗ, ವ್ಯಾಪಾರಗಳ ಕುರಿತು ಯುವಕರಲ್ಲಿ ಚರ್ಚಿಸುವುದು, ಭವಿಷ್ಯದಲ್ಲಿ ಬ್ರಾಹ್ಮಣರು ಸ್ವಯಂ ಉದ್ಯೋಗ ಮಾಡಬೇಕಿರುವ ಅವಶ್ಯಕತೆ, ಅನುಸರಿಸಬೇಕಾದ ಕ್ರಮಗಳ ಕುರಿತು ತಜ್ಞರಿಂದ ಅಭಿಪ್ರಾಯ ಸಂಗ್ರಹಿಸುವುದು, ಸಲಹೆ ಪಡೆಯುವುದು, ಯಶಸ್ವಿ ಉದ್ಯೋಗ ನಿರ್ಮಾಣಕ್ಕೆ ಸಂಪರ್ಕ ಒದಗಿಸುವುದರ ಈ ಚಿಂತಕರ ಸಭೆಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ನಾರಾಯಣ ಜಾಗೀರ್‌ದಾರ್, ಪ್ರಾಸ್ತಾವಿಕವಾಗಿ ಮಾತನಾಡಿದರು. ರವೀಂದ್ರ ಟಿ.ಎಂ., ಪ್ರಮೋದ ದೇಶಪಾಂಡೆ, ರವಿ ಲಾತೂರಕರ್, ಜಯತೀರ್ಥ ಜೋಶಿ, ವಿಶ್ವಾಸ ಮೋಘೇಕರ್ ಪಾಲ್ಗೊಂಡಿದ್ದರು.

ಭವಿಷ್ಯದಲ್ಲಿ ವಿಪ್ರ ಸಮಾಜ ಆರ್ಥಿಕವಾಗಿ ಸದೃಢವಾಗಬೇಕು ಎಂಬ ನಿಟ್ಟಿನಲ್ಲಿ ಸಮಾಜದ 18 ರಿಂದ 35 ವರ್ಷದ ಯುವಕ–ಯುವತಿಯರಿಗೆ ಸ್ವಯಂ ಉದ್ಯೋಗ ಕುರಿತು ಚರ್ಚಿಸಲು ಯುವಕರ ಜೊತೆ ಮಾತನಾಡುವ ಉದ್ದೇಶದಿಂದ ರಾಜ್ಯಾದ್ಯಂತ ಯುವ ಚಿಂತಕರ ಸಭೆ ಆಯೋಜಿಸಲಾಗುತ್ತಿದೆ. ಕಲಬುರಗಿಯಿಂದಲೇ ಈ ಅಭಿಯಾನ ಆರಂಭಿಸಲಾಗಿದೆ.



**ಅಖಿಲ ಕರ್ನಾಟಕ**
**ಬ್ರಾಹ್ಮಣ ಮಹಾಸಭಾ (ರಿ.)**
**ಮಹಾಸಭೆಯು 60 ವರ್ಷ ಮೇಲ್ಪಟ್ಟ ಅಶಕ್ತ ವಿಪ್ರ ವೃದ್ಧರು ಹಾಗೂ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ಮಾಸಾಶನ ನಿಧಿಗೆ ದೇಣಿಗೆ ನೀಡಿ.**

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಂಘಟನಾ ಸಭೆ

# ಮಂಗಳೂರು ತಾಲ್ಲೂಕು ಘಟಕದ ರಚನೆ



ಮಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಭೆಯು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಭವನದಲ್ಲಿ ನಡೆಸಲಾಯಿತು.

ಸಭೆಯಲ್ಲಿ ರಾಜ್ಯ ಉಪಾಧ್ಯಕ್ಷ ನ್ಯಾಯವಾದಿ ಶ್ರೀ ಮಹೇಶ್ ಕಜೆ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ಸ್ಗಖಇ........ ಪೊಳಲಿ ಗಿರಿಪ್ರಕಾಶ್ ತಂತ್ರಿ ಮುಂದಾಳತ್ವದಲ್ಲಿ ಬ್ರಾಹ್ಮಣ್ಯದಡಿ ಬರುವ ಮಂಗಳೂರು ತಾಲೂಕಿನ ಎಲ್ಲಾ ಸಮಾಜ ಬಾಂಧವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಾಲೂಕು ಘಟಕವನ್ನು ರಚನೆ ಮಾಡಲಾಯಿತು.

ಘಟಕಕ್ಕೆ ಆಯ್ಕೆ : ಕೂಟ ಬ್ರಾಹ್ಮಣ ಸಮಾಜದಿಂದ ಶ್ರೀ ಗೋಪಾಲಕೃಷ್ಣ ಮಯ್ಯ, ವಿಶ್ವೇಶ್ವರ ಕಾರಂತ್ ಸುರತ್ಕಲ್, ರವಿ ಪ್ರಸನ್ನ ನ್ಯಾಯವಾದಿ, ಚಂದ್ರಶೇಖರ ಮಯ್ಯ, ಶಿವಳ್ಳಿ ಬ್ರಾಹ್ಮಣ ಸಮಾಜದಿಂದ ರಾಮಕೃಷ್ಣ ರಾವ್, ರವಿ ಪ್ರಸಾದ್, ವಂದನ ಸುರೇಶ್ ಕದ್ರಿ, ಉದಯಶಂಕರ್ ಭಟ್, ಹರಿ ಭಟ್ ಕೋಟೆಕಾರ್, ಕೋಟೇಶ್ವರ ಬ್ರಾಹ್ಮಣ ಸಮಾಜದಿಂದ ಕೃಷ್ಣರಾವ್, ಪ್ರಕಾಶ್ ರಾವ್ ಕೋಟೆಕಾರ್, ಕರ್ಗಿ ಶ್ರೀನಿವಾಸ ಆಚಾರ್ಯ ಚಿತ್ರಾಪುರ, ಹವ್ಯಕ ಬ್ರಾಹ್ಮಣ ಸಮಾಜದಿಂದ ಗೀತಾದೇವಿ, ಸೌಜನ್ಯ, ಸ್ಥಾನಿಕ ಬ್ರಾಹ್ಮಣ ಸಮಾಜದಿಂದ ಉದಯ ಕುಮಾರ್, ಸಂತೋಷ್‌ಕುಮಾರ್ ಕುಸುಮ ನವೀನ ಕುಮಾರ್, ಪುಷ್ಪ ಶ್ರೀನಿವಾಸ್, ಚಿತ್ಪಾವನ ಬ್ರಾಹ್ಮಣ ಸಮಾಜದಿಂದ ಸುಹಾಸ್ ಮರಾಠೆ, ಕರಾಡ ಬ್ರಾಹ್ಮಣ ಸಮಾಜದಿಂದ ಅನಂತಶಯನ ಭಟ್, ಜಯರಾಮ ಭಟ್, ದೇಶಸ್ಥ ಬ್ರಾಹ್ಮಣ ಸಮಾಜದಿಂದ ಪ್ರವೀಣಾ ಅರವಿಂದ್ ಮೊದಲಾದವರು ಹಾಗೂ ಹಿರಿಯರಾದ ಎಂ.ಆರ್. ವಾಸುದೇವ ರಾವ್ ಅವರನ್ನು ಸಲಹೆಗಾರರನ್ನಾಗಿ ಆಯ್ಕೆ ಮಾಡಲಾಯಿತು.

**ಶ್ರದ್ಧಾಂಜಲಿ ಸಮರ್ಪಣೆ :** ಇತ್ತೀಚೆಗೆ ನಿಧನರಾದ ಪತ್ರಕರ್ತ ಮನೋಹ ಪ್ರಸಾದ್, ಕದ್ರಿ ದೇವಳದ ಪವಿತ್ರವಾಣಿ ಹಾಗೂ ಕೀಳೂಶಾಂತಿ ಅರ್ಚಕರಾದ ಕದ್ರಿ ಅನಂತ ಭಟ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

**ಅಭಿನಂದನೆ ಸಲ್ಲಿಕೆ :** ಬ್ರಾಹ್ಮಣ ಅಭಿವೃದ್ಧಿ ನಿಗಮ ಮಂಡಳಿಗೆ ನೂತನವಾಗಿ ಆಯ್ಕೆಯಾದ ಶ್ರೀ ಅಸಗೋಡು ಜಯಸಿಂಹ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.

ಜಿಲ್ಲಾ ಪ್ರಧಾನ ಸಂಚಾಲಕ ಶ್ರೀಧರ್ ಹೊಳ್ಳ ಸ್ವಾಗತಿಸಿದರು. ಮಹೇಶ್ ಕಜೆ ಪ್ರಾಸ್ತಾವಿಸಿ ಬ್ರಾಹ್ಮಣ ಮಹಾಸಭಾದ ಧ್ಯೇಯ ಉದ್ದೇಶಗಳನ್ನು ತಿಳಿಸಿದರು. ಜಿಲ್ಲಾ ಸಂಚಾಲಕ ಕೃಷ್ಣ ಭಟ್ ವಂದಿಸಿದರು. ಸಹ ಸಂಚಾಲಕ ರಾಜೇಂದ್ರ ಕಲ್ಬಾವಿ ನಿರೂಪಿಸಿದರು. ಸಹ ಸಂಚಾಲಕರಾದ ನ್ಯಾಯವಾದಿ ಪುರುಷೋತ್ತಮ ಭಟ್, ಪದಾಬಿಡೆ, ಎಂ.ಟಿ. ಭಟ್, ಹರ್ಷ ಕುಮಾರ್ ಕೇದಿಗೆ, ರಾಜ್ಯ ಸಹ ಕಾರ್ಯದರ್ಶಿಗಳಾದ ಚೇತನಾ ದತ್ತಾತ್ರೇಯ, ಕಾತ್ಯಾಯಿನಿ ಸೀತಾರಾಂ, ರಾಜ್ಯ ಮಹಿಳಾ ಸಹ ಸಂಚಾಲಕಿ ಉಮಾ ಸೋಮಯಾಜಿ ಬಂಟ್ವಾಳ, ರಾಜ್ಯ ಕಾರ್ಯಕಾರಿಣಿ ಮಂಡಳಿ ಸದಸ್ಯರಾದ ಶ್ರೀಕರ ದಾಮ್ಲೆ, ಗುರುರಾಜ್ ಮೊಳ್ಕಾಪು ಮೊದಲಾದವರು ಉಪಸ್ಥಿತರಿದ್ದರು.

# ಸಾಮೂಹಿಕ ಉಪನಯನ



ದಿನಾಂಕ 24,02.2024ರಂದು ಶಂಕರಪುರಂ ಬ್ರಾಹ್ಮಣ ಸಂಘದಿಂದ ಶಂಕರಮಠದ ಯಾಗಮಂಟಪದಲ್ಲಿ ಉಚಿತ ಸಾಮೂಹಿಕ ಉಪನಯನ ಏರ್ಪಡಿಸಿದ್ದರು.ಸುಮಾರು 20ವಟುಗಳು ಭಾಗವಹಿಸಿದ್ದರು. ನಾವು ಸಮಾಜಕ್ಕೆ ಹೇಗೆ ನೆರವಾಗಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಛಾಯಾಪತಿಯವರು ತಿಳಿಸಿಕೊಟ್ಟರು.



ದಿ. ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರು, ನವ ಮಂತ್ರಾಲಯ ಮಂದಿರದ ಟ್ರಸ್ಟಿ, ಮಹಾಸಭೆಯ ಕೇಂದ್ರ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯರೂ, ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘದ ಖಜಾಂಚಿ, ಸದಾ ನಗುಮುಖದ ಸಪ್ತಗಿರಿ ಎ.ಎಸ್. ವಿಜಯ್ ಕುಮಾರ್ ಅನಾರೋಗ್ಯದಿಂದ ನಿಧನರಾಗಿದ್ದಾರೆ, ಮಹಾಸಭೆಯು ತೀವ್ರ ಸಂತಾಪವನ್ನು ವ್ಯಕ್ತಪಡಿಸಿ ಮೃತರ ಆತ್ಮಕ್ಕೆ ಸದ್ಗತಿ ದೊರೆಯಲೆಂದು ಪ್ರಾರ್ಥಿಸುತ್ತದೆ.

ವಿಪ್ರ ಸಮಾಜದ ಮುಖಂಡ, ಬ್ರಾಹ್ಮಣ ಮಹಾಸಭಾ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್.ದೇಶಪಾಂಡೆ ಹಠಾತ್ ನಿಧನದ ಸುದ್ದಿ ಕೇಳಿ ಮನಸ್ಸಿಗೆ ತೀವ್ರ ನೋವುಂಟಾಗಿದೆ. ಬ್ರಾಹ್ಮಣ ಸಮಾಜದ ಸಂಘಟನೆ ವಿಚಾರದಲ್ಲಿ ಅವರು ನನಗೆ ಒಡನಾಡಿಗಳಾಗಿದ್ದರು. ವೃತ್ತಿಯಲ್ಲಿ ನಮ್ಮದು ಒಂದೇ ಕ್ಷೇತ್ರವಾಗಿರುವುದರಿಂದ ಕಾನೂನಿನಲ್ಲೂ ಅವರು ಪರಿಣಿತಿಯನ್ನು ಹೊಂದಿದ್ದರು. ಸಮಾಜಕ್ಕೆ ಜೀವನ ಮೀಸಲಿಟ್ಟಿದ್ದ ದೇಶಪಾಂಡೆ ಅವರಂಥ ಕ್ರಿಯಾಶೀಲ ವ್ಯಕ್ತಿಗಳ ನಿಧನದಿಂದಾಗಿ ಸಮಾಜ ಬಡವಾಗಿದೆ. ಅವರ ಕುಟುಂಬಕ್ಕೆ ದುಖಭರಿಸುವ ಶಕ್ತಿಯನ್ನು ಭಗವಂತ ದಯಪಾಲಿಸಲಿ ಎಂದು ಕೋರಿಕೊಳ್ಳುತ್ತೇನೆ.

ಅಶೋಕ ಹಾರನಹಳ್ಳಿ, ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಬೆಂಗಳೂರು





## ನಿವೃತ್ತ ಐ.ಪಿ.ಎಸ್. ಅಧಿಕಾರಿ ಭಾಸ್ಕರ್ ರಾವ್ ಅವರಿಗೆ ಪಿತೃ ವಿಯೋಗ

ನಿವೃತ್ತ IPS ಅಧಿಕಾರಿ, ಭಾ ಜ ಪ ಮುಖಂಡರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರು ಆದ ಭಾಸ್ಕರ್ ರಾವ್ ಅವರ ತಂದೆ ಆರ್. ಎಸ್. ರಘುನಾಥ್ ಅವರು ದಿನಾಂಕ 20 /03 /2024 ರಂದು ನಿಧನರಾಗಿದ್ದಾರೆ, ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ ಹಾಗು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಹಾಗು ಬಂಧು ಮಿತ್ರರಿಗೆ ಆ ಭಗವಂತ ದಯಪಾಲಿಸಲಿ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಮಸ್ತ ಪದಾಧಿಕಾರಿಗಳು ಹಾಗು ಸದಸ್ಯರು ಆ ಭಗವಂತನಲ್ಲಿ ಪ್ರಾರ್ಥಿಸಿ, ತೀವ್ರವಾದ ಸಂತಾಪವನೂ ಸೂಚಿಸಿರುತ್ತಾರೆ.

ಅಶೋಕ ಹಾರನಹಳ್ಳಿ, ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಬೆಂಗಳೂರು


ಸಂಧ್ಯಾ ಸುರಕ್ಷ ಟ್ರಸ್ಟ್,
ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ).,

**ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ**

ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ, 2ನೇ ಹಂತ, ಮೈಸೂರು – 570 023

**ಹೊಸ ಆವಿಷ್ಕಾರದೊಂದಿಗೆ ನಿಮ್ಮ ಅನುಕೂಲಕ್ಕಾಗಿ**

ತ್ರಿಮತಸ್ಥ ಬ್ರಾಹ್ಮಣ ಬಂಧುಗಳು, ಪೂರ್ವಿಕರ ಎಲ್ಲಾ ಶ್ರಾದ್ಧ ಕರ್ಮಾಧಿಗಳನ್ನು (ವೈದಿಕ) ಅಪರ, ಪೂರ್ವ, ಅಂತ್ಯೇಷ್ಠಿ ಕರ್ಮಾದಿಗಳನ್ನು ನುರಿತ ಆಯಾ ಪಂಗಡದ ಪುರೋಹಿತರಿಂದ, ಆಯಾ ಪಂಗಡದ ಅಡುಗೆಯೊಂದಿಗೆ ನುರಿತ ಅಡಿಗೆಯವರಿಂದ ನಡೆಸಲಾಗುವುದು ಹಾಗೂ ಬೆಳಗ್ಗೆ ಪ್ರಾತಃಕಾಲ 6.00 ರಿಂದ 6.30 ವೇದ ಪಠಣ, 6.30 ರಿಂದ 7.00 ವರೆಗೆ ಭಗವದ್ಗೀತಾ ಪಾರಾಯಣ, ಸಾಯಂಕಾಲ, ಸಂಧ್ಯಾವಂದನೆ, ಕಲಿಕೆ, ಪಾರಾಯಣ, ದೇವಿ ಶಾಕಂಭರಿಗೆ ಮಹಾಮಂಗಳಾರತಿ ಮತ್ತು ಸುಸಜಿತವಾದ 100 ಆಸನಗಳ ಹಾಲಿನಲ್ಲಿ ಹುಟ್ಟು ಹಬ್ಬ ಆಚರಣೆ, ಸೀಮಂತ, ನಾಮಕರಣ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆ ಕೊಠಡಿ ಸಹಿತ ಎಲ್ಲಾ (ಊಟ, ತಿಂಡಿ ಇತರೆ) ವ್ಯವಸ್ಥೆಯೊಂದಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಡಲಾಗುವುದು.

**ವಿ.ಸೂ. ಅಚ್ಚುಕಟ್ಟಾದ ಬ್ರಾಹ್ಮಣ ಅಡಿಗೆಯವರಿಂದ ಕ್ಯಾಟರಿಂಗ್ ವ್ಯವಸ್ಥೆಯಿದೆ.**
**(ಯಾವುದೇ ತರವಾದ ಬಾಡಿಗೆ ಇರುವುದಿಲ್ಲ)**
**ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆ : 8088799540 / 8861998817**

ನಿಮ್ಮ
for H.S [signature]
**ಡಾ. ಬಿ.ಆರ್. ನಟರಾಜ್ ಜೋಯಿಸ್**
**ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ**

**ಮರೆಯಲಾಗದ ಮಹನೀಯರು – ಮಾಲಿಕೆಯ 25ನೇ ಲೇಖನವಾಗಿದೆ. ನಿರಂತರವಾಗಿ ಸಮಜದ ಅಪ್ರತಿಮ ಸಾಧಕರ ಕಿರು ಪರಿಚಯವನ್ನು ಅಧಿಕೃತ ಮಾಹಿತಿ ಪೂರ್ಣವಾಗಿ ನೀಡಿದ ಲೇಖಕ ಶ್ರೀ ಸುರೇಶ್ ಮೂನರವರಿಗೆ ಹಾರ್ದಿಕ ಕೃತಜ್ಞತೆಗಳು.**

# ಕೃಷಿ ವಿಜ್ಞಾನಿ ಡಿ. ಶೇಷಗಿರಿರಾವ್

**– ಸುರೇಶ್ ಮೂನ**



ಕೃಷಿ ವಿಜ್ಞಾನಿಯಾಗಿ, ಸಾಹಿತಿಯಾಗಿ, ಭಾಷಾಂತರ ಪರಿಣಿತರಾಗಿ ನಮ್ಮ ನಾಡು ನುಡಿಗೆ ಸೇವೆ ಸಲ್ಲಿಸಿದ ಮಹನೀಯರು ಡಿ. ಶೇಷಗಿರಿ ರಾವ್. ತಮ್ಮ ಸಮುದಾಯದ ಈ ಮಹಾನುಭಾವರ ಜೀವನ ಮತ್ತು ಸಾಧನೆಯನ್ನು ಹೊಯ್ಸಳ ಕರ್ನಾಟಕ ಸಂಸ್ಥೆಯು ಹೊಯ್ಸಳ ಮಾಲೆ ಸರಣಿ 24ನೇ ಕೃತಿಯಾಗಿ ಹೊರ ತಂದಿದೆ. ಇದನ್ನು ಬರೆದವರು ಹೆಸರಾಂತ ವಿಜ್ಞಾನಿ ಮತ್ತುಆಕಾಶಕಾಯಗಳ ಬಗ್ಗೆ ಪರಿಣಿತಿ ಹೊಂದಿದ್ದ ಸಿ ಎಸ್ ಸತ್ಯ ಅವರು. ಇವರು ಶೇಷಗಿರಿರಾಯರ ಅಳಿಯಂದರು .ಈ ಕೃತಿಯು ಪ್ರಸ್ತುತ ಲೇಖನಕ್ಕೆ ಪ್ರಮುಖ ಆಧಾರವಾಗಿದ್ದು ಹೊಯ್ಸಳ ಕರ್ನಾಟಕ ಸಮುದಾಯಕ್ಕೆ ನನ್ನ ಕೃತಜ್ಞತೆ ಸಲ್ಲುತ್ತದೆ.

ಡಿ. ಶೇಷಗಿರಿರಾವ್ ಅವರು ಡಿ. ವೆಂಕಟನಾರಾಣಪ್ಪ ಮತ್ತು ಡಿ ವೆಂಕಟಲಕ್ಷಮ್ಮ ಇವರ ಪುತ್ರರಾಗಿ 1907ರ ಅಕ್ಟೋಬರ್ 29ನೇ ತಾರೀಕು ಕೊತ್ತಮಂಗಲ ಎಂಬಲ್ಲಿ ಜನಿಸಿದರು. ಮೈಸೂರು ಸಂಸ್ಥಾನದಲ್ಲಿ ವಿದ್ವತ್ತು, ಸಂಸ್ಕೃತಿ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಅಮೂಲ್ಯ ಕೊಡುಗೆ ನೀಡಿರುವ ಮಹಾನುಭಾವರು ಗಳಿಂದ ಕೂಡಿದ ಮನೆತನ ಇವರದ್ದು. ಶೌರ್ಯ ಸಾಹಸಗಳಿಗೂ ಇವರ ಹಿರಿಯರು ಪ್ರಸಿದ್ಧರಾಗಿದ್ದರು ಎಂಬುದಕ್ಕೆ ಒಂದು ನಿದರ್ಶನ ವುಂಟು. ಡಿ ಎಂದರೆ ದೇವರಾಯನದುರ್ಗ. ಇವರ ಮುತ್ತಜ್ಜನ ತಂದೆ ವಸಂತಯ್ಯ ಅಲ್ಲಿಯೇ ವಾಸಿಸುತ್ತಿದ್ದರು. ಆಗ ದುರ್ಗವು ಹೈದರಾಲಿಯ ವಶದಲ್ಲಿದ್ದು ಆತನ ಒಬ್ಬ ಪಾಳೇಗಾರ ಇದರ ಉಸ್ತುವಾರಿಯನ್ನು ವಹಿಸಿದ್ದನು. ಒಮ್ಮೆ ಮರಾಠರ ಸೈನ್ಯ ದುರ್ಗವನ್ನು ಮುತ್ತಿಗೆ ಹಾಕಿತು. ಪಾಳೇಗಾರನ ಸೈನಿಕರೆಲ್ಲ ಒಂದು ಉತ್ಸವದಲ್ಲಿ ಮೈ ಮರೆತಿದ್ದರು. ಆಗ ವಸಂತಯ್ಯ ಅವರೇ ಖಡ್ಗವನ್ನು ಹಿಡಿದು ಕೆಲವು ಸೈನಿಕರನ್ನು ಕಲೆ ಹಾಕಿ ಯುದ್ಧ ಘೋಷಣೆಗಳನ್ನು ಕೂಗುತ್ತಾ ದಂಡಿನ ನಾಯಕತ್ವವನ್ನು ವಹಿಸಿ ವೈರಿಗಳನ್ನು ಹಿಂದಕ್ಕೆ ಅಟ್ಟಿದ್ದರಂತೆ. ಈ ಸಾಹಸ ತಿಳಿದ ಹೈದರಾಲಿಯು ಅವರನ್ನು ಬರಮಾಡಿಕೊಂಡು ಸೂಕ್ತ ರೀತಿಯಲ್ಲಿ ಗೌರವಿಸಿ ಸತ್ಕರಿಸಿದನಂತೆ.

ಸ್ವಲ್ಪ ಕಾಲದ ನಂತರ ಕೋಲಾರದ ಬ್ರಿಟಿಷ್ ಮನೆತನದ ಮೂರ್ ಎಂಬಾತ ಒಮ್ಮೆ ದುರ್ಗಕ್ಕೆ ಬಂದಿದ್ದಾಗ ವಸಂತಯ್ಯ ಮತ್ತು ಅವರ ಸುಶಿಕ್ಷಿತ ಸಂಸಾರವನ್ನು ಕಂಡು ಸಂಗೀತ, ಸಾಹಿತ್ಯ ,ಭಾಷಾ ವಿಜ್ಞಾನದಲ್ಲಿ ಪರಿಣಿತರಾದ ನೀವು ಇಲ್ಲಿ ಏನು ಮಾಡುತ್ತೀರಿ, ಕೋಲಾರಕ್ಕೆ ಬನ್ನಿ. ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೂ ನೆರವಾಗಿ. ನಿಮ್ಮ ಜೀವನಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನು ಮಾಡಿಕೊಡುತ್ತೇನೆ ಎಂದಿದ್ದನಂತೆ. ಹೀಗಾಗಿ ಅಲ್ಲಿಂದ ಈ ಮನೆತನ ಕೋಲಾರಕ್ಕೆ ಬಂದು ನೆಲೆಸಿತು.

ಡಿ. ಶೇಷಗಿರಿರಾವ್ ಅವರ ತಂದೆ ಡಿ. ವೆಂಕಟನಾರಣಪ್ಪನವರು ಸ್ಯಾನಿಟರಿ ಇನ್ಸ್‌ಪೆಕ್ಟರ್ ರಾಗಿ ಸರ್ಕಾರಿ ಕೆಲಸದಿಂದ ನಿವೃತ್ತಿ ಹೊಂದಿದವರು. ಇಂಗ್ಲಿಷ್ ಸಾಹಿತ್ಯದಲ್ಲಿ ಅಪಾರ ಆಸಕ್ತಿ ಹಾಗೂ ಭಾಷಾ ಶ್ರದ್ಧೆಯು ಇತ್ತು. ಇನ್ನು, ಇವರ ಧರ್ಮಪತ್ನಿ ಅಂದರೆ ಶೇಷಗಿರಿರಾಯರ ತಾಯಿ ಡಿ. ವೆಂಕಟಲಕ್ಷಮ್ಮ, ಲೌಕಿಕ ಜ್ಞಾನ, ದೈವಭಕ್ತಿ, ಗಮಕ ಕಲೆ ಮುಂತಾದ ಸದ್ಗುಣಗಳ ಆಗರ ವಾಗಿದ್ದರು. ಇವರ ತಂದೆ ಮೈಸೂರು ಮಹಾರಾಜರ ಆಸ್ಥಾನದಲ್ಲಿ ರಾಜಕವಿಯಾಗಿದ್ದ 'ಕವಿ ತಿಲಕ' ಸೋಸಲೆ ಅಯ್ಯಾ ಶಾಸ್ತ್ರಿಗಳು. '......ಸ್ವಾಮಿದೇವನೆ ಲೋಕಪಾಲನೆ ತೇ ನಮೋಸ್ತು ನಮೋಸ್ತುತೆ....' ಎಂಬ ಸರಳ, ಅದ್ಭುತ ಪ್ರಾರ್ಥನಾ ಗೀತೆಯನ್ನು ನಮ್ಮ ನಾಡಿಗೆ ನೀಡಿದ ಮಹಾನುಭಾವರು. ಇವರು ತಮ್ಮ ಮಗಳು ವೆಂಕಟಲಕ್ಷಮ್ಮ ಅವರಿಗೆ ಅರಮನೆಯ ರಾಯಲ್ ಸ್ಕೂಲಿನಲ್ಲಿ ಶಿಕ್ಷಣ ಕೊಡಿಸಿದ್ದರು. ಹೀಗೆ ಒಂದು ಅಪರೂಪದ ಸಾಂಸ್ಕೃತಿಕ ಪರಂಪರೆಯನ್ನೇ ರಕ್ತಗತವಾಗಿ ಪಡೆದು ಜನಿಸಿದವರು ಡಿ. ಶೇಷಗಿರಿರಾವ್.

ತಂದೆ ಡಿ. ವೆಂಕಟನಾರಣಪ್ಪನವರು ವೃತ್ತಿ ನಿಮಿತ್ತ ಪರಸ್ಥಳಗಳಿಗೆ ವರ್ಗಾವಣೆ ಗೊಳ್ಳುತ್ತಿದ್ದರಿಂದ ಮಗ ಶೇಷಗಿರಿಯನ್ನು ಮೈಸೂರಿನ ಚಾಮರಾಜಪುರಂ ನಲ್ಲಿ ವಾಸವಾಗಿದ್ದ ಅಯ್ಯಾ ಶಾಸ್ತ್ರಿಗಳ ಮನೆಯಲ್ಲೇ ವಿದ್ಯಾಭ್ಯಾಸಕ್ಕಾಗಿ ಬಿಟ್ಟಿದ್ದರು. ಕವಿತಾ ವಿಳಾಸ ಎಂಬ ಈ ಮನೆ ಸುಸಂಸ್ಕೃತ ವಾತಾವರಣವನ್ನು ಹೊಂದಿತ್ತು. ಈ ಪರಿಸರದಲ್ಲಿ ಬೆಳೆದ ಶೇಷಗಿರಿರಾಯರು ತಮ್ಮ ಹೈಸ್ಕೂಲ್ ಮತ್ತು ಆಗಿನ ಯೂನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆಯನ್ನು ಮುಗಿಸಿದರು. ಆನಂತರದ ಕಾಲೇಜು ಅಧ್ಯಯನಕ್ಕಾಗಿ ಬೆಂಗಳೂರಿಗೆ ಬಂದು 1927 ರಲ್ಲಿ ಸೆಂಟ್ರಲ್ ಕಾಲೇಜಿಗೆ ಸೇರಿ ಜೀವಶಾಸ್ತ್ರ ಮತ್ತು ಸಸ್ಯಶಾಸ್ತ್ರ ವಿಷಯಗಳನ್ನು ಆರಿಸಿಕೊಂಡು ಬಿಎಸ್ಸಿ ಪರೀಕ್ಷೆಯಲ್ಲಿ ಪ್ರಥಮ ರಾಂಕ್ ಪಡೆದರು. ಅದಕ್ಕಾಗಿ ಅವರಿಗೆ ಚಿನ್ನದ ಪದಕವು ಲಭಿಸಿತ್ತು. ಮುಂದೆ ಹೆಚ್ಚಿನ ಶಿಕ್ಷಣವನ್ನು ಪಡೆಯುವ ಹಾಗೂ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ತೆಗೆದುಕೊಳ್ಳುವ ಅಭಿಲಾಷೆ ಇತ್ತಾದರೂ ಕಾರಣಾಂತರಗಳಿಂದ ಅವು ಕೈಗೂಡಲಿಲ್ಲ.

ಇವರು 1927ರ ನವೆಂಬರ್ 21 ರಂದು ಮೈಸೂರು ಸರ್ಕಾರದ ಪ್ರಾಣಿಶಾಸ್ತ್ರ ವಿಭಾಗದಲ್ಲಿ ನಂತರ ಕೃಷಿ ವಿಭಾಗದಲ್ಲಿ ಸಹಾಯಕ ಕೀಟ

ವಿಜ್ಞಾನಿಯಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದರು. ನಂತರ ಕಿರಿಯ ಸಹಾಯಕ ಕೀಟ ವಿಜ್ಞಾನಿ , ಸರ್ಕಾರದ ಆಹಾರ ಇಲಾಖೆಯಲ್ಲಿ ಧಾನ್ಯ ಶೇಖರಣೆ ಸಮಿತಿಯ ಕಾರ್ಯದರ್ಶಿ, ಧಾನ್ಯ ಶೇಖರ ಅಧಿಕಾರಿ, ಸಹಾಯಕ ಕೀಟ ವಿಜ್ಞಾನಿ ಈ ಹುದ್ದೆಗಳನ್ನು ನಿರ್ವಹಿಸಿ ಹಂಗಾಮಿ ಕೀಟ ವಿಜ್ಞಾನಿಯಾಗಿ 1962ರಲ್ಲಿ ನಿವೃತ್ತರಾದರು.

1934 ರಿಂದ 1960ರ ಅವಧಿಯಲ್ಲಿ ಬೆಂಗಳೂರು ಹೆಬ್ಬಾಳದ ಕೃಷಿ ವಿಜ್ಞಾನದ ಕಾಲೇಜಿನ ಕೀಟ ವಿಭಾಗದಲ್ಲಿ ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ಗಳ ಬಗ್ಗೆ ಪಾಠ ಹೇಳುವ ಮತ್ತು ಸಂಶೋಧನೆಯ ಕಾರ್ಯಕ್ಕೆ ತೊಡಗುವ ಅವಕಾಶ ಲಭಿಸಿತು. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಇವರು ಪಾಠ ಹೇಳಿದ್ದುಂಟು. ಇವೆಲ್ಲವೂ ಇವರಲ್ಲಿನ ವೈಜ್ಞಾನಿಕ ಮನೋಭಾವ ಮತ್ತು ಸಂಶೋಧನಾ ಪ್ರವೃತ್ತಿಗೆ ಹೆಚ್ಚು ಇಂಬು ಕೊಟ್ಟವು. ಹೀಗಾಗಿ ಸುಮಾರು 40 ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಬರೆದು ಪ್ರಕಟಿಸಿದರು. ಅವರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮಂಡಿಸಿದ ಆ ಪ್ರಬಂಧಗಳು ಇಂದಿಗೂ ಈ ಕ್ಷೇತ್ರದ ಸಂಶೋಧಕರಿಗೆ ಉತ್ತಮ ಆಕರ ಸಾಮಗ್ರಿಗಳಾಗಿವೆ. ಮೂಷಿಕ ಪ್ರಕರಣ, ಸಸ್ಯ ಸಂರಕ್ಷಣಾ ಕೈಪಿಡಿ, ಮನುಷ್ಯ ದೇಹಾವಲಂಬಿ ಪರೋಪಜೀವಿ ಪ್ರಾಣಿಗಳು, ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು, ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ, ಗೃಹ ಕೀಟಗಳು, ಮಾನವ ಪರೋಪ ಜೀವಿ ಸಸ್ಯಗಳು, ಜೇನುಸಾಗಾಣಿಕೆ, ಶ್ರೀಗಂಧ, ವಿಷ ಜಂತುಗಳು, ಪರಿಸರ ಪಾಲನೆ ಮುಂತಾದ ಇವರ ಬರಹಗಳು ಇವರ ಭಾಷಾಜ್ಞಾನ, ಸಾಹಿತ್ಯಾಸಕ್ತಿ, ವೈಜ್ಞಾನಿಕ ವಿವೇಚನೆ ಮತ್ತು ಅಪಾರವಾದ ಅನುಭವದಿಂದ ಹೊರಹೊಮ್ಮಿದ ವೈಜ್ಞಾನಿಕ ಸಾಹಿತ್ಯ ಕೃಷಿಯಾಗಿದೆ.

1959ರ ನವಂಬರ್ ನಿಂದ 1960ರ ಫೆಬ್ರುವರಿ ವರೆಗೆ ದೆಹಲಿಯಲ್ಲಿ ನಡೆದ ಕೃಷಿ ಸಮ್ಮೇಳನದಲ್ಲಿ ಮೈಸೂರು ಸರ್ಕಾರವು ಭಾಗವಹಿಸಿತ್ತು. ರಾಜ್ಯದಲ್ಲಿನ ಸಸ್ಯ ಸಂಪತ್ತು, ಅವುಗಳ ರಕ್ಷಣೆ, ಸಂಶೋಧನಾ ಕಾರ್ಯಗಳ ಬಗ್ಗೆ ವಿಜ್ಞಾನಿಗಳಿಗೆ ಹಾಗೂ ಸಾಮಾನ್ಯ ಜನರಿಗೆ ವೈಜ್ಞಾನಿಕವಾಗಿ ಮತ್ತು ತಾಂತ್ರಿಕವಾಗಿ ವಿಷಯಗಳನ್ನು ತಲುಪಿಸಲು ಕರ್ನಾಟಕ ಸರ್ಕಾರ ಚಿತ್ರ ಮತ್ತು ಬರಹ ಮಾಧ್ಯಮಗಳೊಂದಿಗೆ ತನ್ನದೇ ಆದ ಆಕರ್ಷಕ ಪ್ರದರ್ಶನ ಮಳಿಗೆಯನ್ನು ನಿರ್ಮಿಸಿತ್ತು. ಈ ಎಲ್ಲಾ ಕಾರ್ಯಗಳಿಗೂ ಶೇಷಗಿರಿ ರಾಯರನ್ನು ಮುಖ್ಯಸ್ಥರನ್ನಾಗಿ ಮಾಡಿ ದೆಹಲಿಗೆ ಹೋಗಲು ಆದೇಶ ನೀಡಿತ್ತು. ಇಂತಹ ಗುರುತರವಾದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ಮತ್ತು ಸಮರ್ಪಕವಾಗಿ ನಿರ್ವಹಿಸಿದ ರಾಯರ ಕಾರ್ಯವನ್ನು ಅಂದಿನ ಪ್ರಧಾನಿ ಶ್ರೀ ಜವಾಹರಲಾಲ್ ನೆಹರುರವರೂ ಕೂಡ ಮೆಚ್ಚಿಕೊಂಡಿದ್ದರು. ಅವರು ಮುನ್ಸೂಚನೆ ಇಲ್ಲದೆಯೇ ಮೈಸೂರು ಸರ್ಕಾರದ ಮಳಿಗೆಗೆ ಭೇಟಿಕೊಟ್ಟಾಗ ರಾಯರು ಅವರನ್ನು ಸ್ವಾಗತಿಸುತ್ತಾ '......ವೆಲ್ಕಮ್ ಸರ್, ಅವರ್ ಪವಿಲಿಯನ್ ಈ ಸ್ ಸ್ಯಾಂಕ್ಟೀಫೈಡ್ ಬೈ ದಿ ಗ್ರೇಸಿ ಯಸ್ ಫೀಟ್ ಆಫ್ ಆನರಬಲ್ ಪ್ರೈಮ್ ಮಿನಿಸ್ಟರ್......' ಎಂದಾಗ ನೆಹರು ಅವರು ಹೋ ಹೋ ಎಂದು ನಗುತ್ತಾ ಉದ್ಗರಿಸಿದರಂತೆ. ನಂತರ ಮೈಸೂರು ರಾಜ್ಯದಲ್ಲಿನ ಕೃಷಿ ವಿಜ್ಞಾನದ ಪ್ರಗತಿಯ ಬಗ್ಗೆ ರಾಯರಿಂದ ತಿಳಿದ ಪ್ರಧಾನ ಮಂತ್ರಿಗಳು ಅವರನ್ನು ಮೆಚ್ಚಿ ಕೊಂಡರಂತೆ. ರಾಯರು ದೆಹಲಿಯಲ್ಲಿ ನಮ್ಮ ರಾಜ್ಯಕ್ಕೆ ತಂದ ಈ ಗೌರವದ ಸಲುವಾಗಿ ಅವರಿಗೆ ಚಿನ್ನದ ಪದಕವನ್ನು ಮೆಚ್ಚುಗೆಯ ಸಂಕೇತವಾಗಿ ನೀಡಲಾಯಿತು.

ನಿವೃತ್ತಿಯ ನಂತರ ಅವರು ಬೆಂಗಳೂರಿನ ಪ್ರಖ್ಯಾತ ಉದ್ಯಮಿಗಳು ಹೊಯ್ಸಳ ಕರ್ನಾಟಕ ಸಮುದಾಯದ ಗಣ್ಯ ವ್ಯಕ್ತಿಗಳೂ ಆಗಿದ್ದ ಎಸ್.ವಿ. ರಂಗಸ್ವಾಮಿಯವರ ಎಸ್ ವಿ ಆರ್ ಅಂಡ್ ಕಂಪನಿಯಲ್ಲಿ ತಾಂತ್ರಿಕ ಸಲಹೆಗಾರರಾಗಿ ಸುಮಾರು ಎಂಟು ವರ್ಷಗಳ ಕಾಲ ಕಾರ್ಯನಿರ್ವಹಿಸಿದರು.

ಈಗ ನಮ್ಮ ಭೂಮಿಯನ್ನು ಕಾಡುತ್ತಿರುವ ಮಾಲಿನ್ಯದ ನಿವಾರಣೆಯ ಬಗ್ಗೆ ಸುಮಾರು ಏಳು ದಶಕಗಳ ಹಿಂದೆಯೇ ರಾಯರು ಕಾಳಜಿ ವಹಿಸಿದ್ದರು. ಮಾನವ ನಿರ್ಮಿತ ಕ್ರಿಮಿನಾಶಕಗಳು ಕ್ರಿಮಿಕೀಟಗಳನ್ನು ಹತೋಟಿಗೆ ತಂದರೂ ಉಳುವ ಭೂಮಿಗೂ ಸೇರಿ ಮಣ್ಣಿನ ಸತ್ವವನ್ನು ಹಾಳು ಮಾಡುತ್ತದೆ. ಹೀಗಾಗಿ ನಮ್ಮ ನಡುವೆಯೇ ಇರುವ ಬೇವಿನ ಸೊಪ್ಪಿನಂತಹ ಸಸ್ಯ ಮೂಲಗಳು ಕ್ರಿಮಿನಾಶಕ ಗುಣಗಳನ್ನು ಹೊಂದಿರುತ್ತವೆ. ಅಂತಹವುಗಳನ್ನು ಬಳಸಿದಾಗ ಕೀಟ ನಿಯಂತ್ರಣವೂ ಆಗುತ್ತದೆ, ಭೂಮಿಯ ಫಲವತ್ತತೆಯು ಹಾಗೆ ಉಳಿಯುತ್ತದೆ ಎಂಬುದನ್ನು ಪ್ರಯೋಗ ಶಾಲೆಯಲ್ಲಿ ಅಧ್ಯಯನ ಮಾಡಿ ಅಂತಹ ಸಸ್ಯಗಳ ಪಟ್ಟಿಯನ್ನು ಮಾಡಿದ್ದರು. ಇಂತಹ ಸಂಶೋಧನೆಗೆ ಬೇಕಾದ ಸಲಕರಣೆ ಉಪಕರಣಗಳನ್ನು ತಾವೇ ತಯಾರಿಸಿದ್ದರು.

ಕೃಷಿ ವಿಜ್ಞಾನ ರಾಯರ ಪ್ರತಿಭೆಯ ಒಂದು ಮುಖವಾದರೆ ಸಾಹಿತ್ಯ ಕೃಷಿ ಅವರ ಪ್ರತಿಭೆಯ ಮತ್ತೊಂದು ಮುಖವನ್ನು ಸೂಚಿಸುತ್ತದೆ. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಪುಸ್ತಕಗಳ ಓದಿನ ಬಗ್ಗೆ ಆಳವಾದ ಗೀಳನ್ನು ಬೆಳೆಸಿಕೊಂಡಿದ್ದ ಇವರು ಇಂಗ್ಲಿಷ್ ಕಾದಂಬರಿಗಳನ್ನು ಮತ್ತಿತರ ಸಾಹಿತ್ಯ ಕೃತಿಗಳನ್ನು ಓದಿ ಭಾಷೆ ಮತ್ತು ಸಾಹಿತ್ಯ ಜ್ಞಾನದ ಪರಿಣಿತಿಯನ್ನು ಪಡೆದಿದ್ದರು.

ರಾಯರ ಸ್ವಂತ ಮನೆ ಪಾರಿಜಾತ ಇದ್ದದ್ದು ಮಲ್ಲೇಶ್ವರದ ವೆಸ್ಟ್ ಪಾರ್ಕ್ ರಸ್ತೆಯಲ್ಲಿ. ಹೆಸರಿಗೆ ತಕ್ಕಂತೆ ಈ ಮನೆ ಸಾಹಿತ್ಯದ ಕಂಪನ್ನು ಬೀರುತ್ತಿತ್ತು. ಮಲ್ಲೇಶ್ವರದ ಸಾಹಿತ್ಯಾಸಕ್ತರಾಗಿದ್ದ ತಿರುಮಲೆ ಶ್ರೀನಿವಾಸ ಆಚಾರ್, ಗಮಕ ರಾಮಾರಾಧ್ಯರು, ಎ.ಸಿ ನಂಜುಂಡಯ್ಯನವರು, ಎನ್ ವೆಂಕಟಾಚಾರ್, ಪುತಿನ ಮುಂತಾದ ಸಮಾನಮನಸ್ಕ ಚಿಂತಕರ ಸಹೃದಯ ಗೋಷ್ಠಿ ಪಾರಿಜಾತದಲ್ಲಿ ನಡೆಯುತ್ತಿತ್ತು. ಕಾಫಿ, ರುಚಿಕರವಾದ ತಿಂಡಿ ಪಾರ್ಟಿಗಳ ನಡುವೆ ಅನೇಕ ಗಹನವಾದ ಸಾಹಿತ್ಯದ ಚರ್ಚೆಗಳು ನಡೆಯುತ್ತಿದ್ದವು. ಇವೆಲ್ಲವೂ ಸಾಹಿತ್ಯದಲ್ಲೂ ರಾಯರು ಅನೇಕ ಕೃತಿಗಳನ್ನು ಹೊರತರಲು ಅನುವಾದವು.

ಎಸ್ ವಿ ರಂಗಸ್ವಾಮಿ ಅವರ ಸಲಹೆಯಂತೆ ನಮ್ಮ ನಾಡಿನ ಪ್ರಸಿದ್ಧ ಡೆಕ್ಕನ್ ಹೆರಾಲ್ಡ್ ಪತ್ರಿಕೆ ರಾಯರನ್ನು ಕೃಷಿ ವಿಜ್ಞಾನದ ಮೇಲೆ ಬರುತ್ತಿದ್ದ ಪುಸ್ತಕಗಳನ್ನು ವಿಮರ್ಶಿಸಲು ನೇಮಿಸಿಕೊಂಡಿತು. ಸುಮಾರು ಐದು ವರ್ಷಗಳಲ್ಲಿ 50ಕ್ಕೂ ಹೆಚ್ಚು ಪುಸ್ತಕಗಳ ವಿಮರ್ಶೆಯನ್ನು ರಾಯರು ಅಚ್ಚುಕಟ್ಟಾಗಿ ಮಾಡಿದರು. ಇದೇ ಪತ್ರಿಕೆಯ ಎಡಿಟರ್ಸ್ ಪೇಜ್ ನಲ್ಲಿ ಇಂಗ್ಲಿಷ್ ಅಂಕಣಗಳನ್ನು ಬರೆದರು.

1968ರಲ್ಲಿ ರಾಯರು 'ಯಾರಿಗುಂಟು ಯಾರಿಗಿಲ್ಲ' ಎಂಬ ಮೂರು ಅಂಕದ ನಾಟಕವನ್ನು ಬರೆದು ಪ್ರಕಟಿಸಿದರು. ಇದನ್ನು ಓದಿದ ಜಿ ಪಿ ರಾಜರತ್ನಂ ರವರು '.....ಖದೀಮ ಬರವಣಿಗೆ. ಐ ಎಂಜಾಯ್ಡ್ ರೀಡಿಂಗ್ ದಿಸ್ ಸ್ಕ್ರಿಪ್ಟ್. ಗಾಡ್ ಬ್ಲೆಸ್ ದಿ ಆಥರ್....' ಎಂದು ಬರೆದಿದ್ದರು.

ರಾಯರು ಮುಂದೆ ಭಾಷಾಂತರದ ಕಡೆಗೆ ಹೆಚ್ಚು ಗಮನ ನೀಡಿದರು. ಡಾಕ್ಟರ್ ಡಿವಿಜಿಯವರ ಮಂಕುತಿಮ್ಮನ ಕಗ್ಗವನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸುವ ಅಭಿಲಾಷೆ ಇವರದಾಗಿತ್ತು. ಅಂತಹ ಮೇರುಕೃತಿಯನ್ನು ಅನುವಾದಿಸುವುದು ಬಹಳ ಜವಾಬ್ದಾರಿಯ ಕೆಲಸ. ಮನಸ್ಸಿನಲ್ಲಿ ಆತಂಕವೇನೋ ಇತ್ತು. ಆದರೂ ಆ ಕಾರ್ಯವನ್ನು ಮುಗಿಸಿ ಡಿವಿಜಿಯವರ ಬಳಿಗೆ ಕೃತಿಯನ್ನು ತೆಗೆದುಕೊಂಡು ಹೋಗಿ ಓದಿ ಕೊಡಬೇಕೆಂದು ಅರಿಕೆ ಮಾಡಿಕೊಂಡಾಗ ಡಿವಿಜಿಯವರು''...... ಶೇಷಗಿರಿ, ನೀನೇಕೋ ಈ ಸಾಹಿತ್ಯಕ್ಕೆ ಕೈ ಹಾಕ್ತಿ? ಕೀಟ ಶಾಸ್ತ್ರದ ಮೇಲೆ ಬರೆಯುತ್ತಿಲ್ಲ ಅದನ್ನೇ ಮುಂದುವರಿಸು...' ಎಂದರಂತೆ.

ಇದರಿಂದ ರಾಯರು ನಿರಾಸೆಗೊಂಡರು. ಮತ್ತೆ ವಿನಯದಿಂದ '..ದಯವಿಟ್ಟು ಇದನ್ನು ನೀವು ನೋಡಬೇಕು..' ಎಂದರಂತೆ. ಆಗ ಡಿವಿಜಿಯವರು,' ನಾನು ಆಗಲೇ ಈ ಕೆಲಸವನ್ನು ಒಬ್ಬ ಇಂಗ್ಲಿಷ್ ಪ್ರೊಫೆಸರ್ ಗೆ ವಹಿಸಿದ್ದೇನೆ' ಎಂದು ಹೇಳಿದರಂತೆ. ರಾಯರು ಮತ್ತೊಮ್ಮೆ ಡಿವಿಜಿ ಅವರಿಗೆ 'ಇದನ್ನು ದಯವಿಟ್ಟು ತಾವು ನೋಡಬೇಕು' ಎಂದು ಹೇಳಿ ಉತ್ತರಕ್ಕೆ ಕಾಯದೆ ಬಂದು ಬಿಟ್ಟರಂತೆ. ಸುಮಾರು ಒಂದು ತಿಂಗಳ ನಂತರ ಡಿವಿಜಿ ಅವರಿಂದ ಕರೆ ಬಂದು ಹೋಗಿ ಅವರನ್ನು ನೋಡಿದಾಗ, '....ಶೇಷಗಿರಿ ಆ ಇಂಗ್ಲಿಷ್ ಪ್ರೊಫೆಸರ್ ತೃಪ್ತಿಕರವಾಗಿ ಕೆಲಸ ಮಾಡಿಲ್ಲ. ನಿನ್ನ ಭಾಷಾಂತರ ತುಂಬಾ ಸೊಗಸಾಗಿದೆ. ಇಂಗ್ಲಿಷ್ ಭಾಷೆಯ ಮೇಲೆ ನಿನಗೆ ಇಂತಹ ಪ್ರೌಢಿಮೆ ಇದೆ ಎಂದೇ ನನಗೆ ಗೊತ್ತಿಲ್ಲ. ಎಷ್ಟೇ ಆಗಲಿ ಅಯ್ಯಾ ಶಾಸ್ತ್ರಿಗಳ ಮೊಮ್ಮಗ ಅಲ್ವೇನೋ....' ಎಂದು ಪ್ರಶಂಸೆಯ ಮಾತನಾಡಿದರಂತೆ.

ಕಗ್ಗದ ಸಾರವನ್ನು ಇಂಗ್ಲಿಷ್‌ನಲ್ಲಿ ಬಟ್ಟಿ ಇಳಿಸಲು ಹಲವಾರು ದಶಕಗಳ ಇಂಗ್ಲಿಷ್ ಸಾಹಿತ್ಯದ ಓದು ಬರಹದಲ್ಲಿ ರೂಢಿಸಿಕೊಂಡಿದ್ದ ಭಾಷಾಜ್ಞಾನವನ್ನು ರಾಯರು ಇಲ್ಲಿ ಸದುಪಯೋಗ ಪಡಿಸಿಕೊಂಡಿದ್ದರು. ಹೀಗಾಗಿ ರಾಯರಿಗೆ ಬಹುಮಟ್ಟಿನ ಆತ್ಮ ತೃಪ್ತಿಯನ್ನು ತಂದುಕೊಟ್ಟ ಮಹತ್ವಪೂರ್ಣ ಕೃತಿ ಇದು.

ಮುಂದೆ ಸರ್ವಜ್ಞ, ಪುರಂದರದಾಸರು, ಅಕ್ಕಮಹಾದೇವಿ, ಕುಮಾರವ್ಯಾಸ ಮಹಾಭಾರತದಂತಹ ಅಮೂಲ್ಯ ಕೃತಿಗಳನ್ನು ಅಷ್ಟೇ ಸಮರ್ಪಕವಾಗಿ ಇವರು ಇಂಗ್ಲಿಷ್ ಭಾಷೆಯಲ್ಲಿ ಓದುಗರಿಗೆ ನೀಡಿದರು. 1989 ರಲ್ಲಿ ತೊದಲು ನುಡಿ ಎಂಬ ತಮ್ಮ 32 ಗದ್ಯ ಕವಿತೆಗಳ ಸಂಗ್ರಹವನ್ನು ಪ್ರಕಟಿಸಿದರು.

ಕೃಷಿಯಲ್ಲಿ ನೆಲವನ್ನು ಹದ ಮಾಡಿ ಉತ್ತಮವಾದ ಬೀಜವನ್ನು ನೆಟ್ಟು ಕ್ರಮಬದ್ಧವಾಗಿ ನೀರು ಒದಗಿಸಿದಾಗ ಬೀಜ ಚಿಗುರು ಹೊಡೆದು ಉತ್ತಮ ಫಲ ನೀಡುತ್ತದೆ. ಕೃಷಿ ವಿಜ್ಞಾನಿಯಾಗಿದ್ದ ರಾಯರು ಇದೇ ಕ್ರಮವನ್ನು ತಮ್ಮ ಸಾಹಿತ್ಯ ಕೃಷಿಯಲ್ಲೂ ಅನುಸರಿಸಿದ್ದರು. ನಿಷ್ಕಾಮ ಕರ್ಮದಲ್ಲಿ ಪ್ರಬಲವಾದ ನಂಬಿಕೆ ಇದ್ದ ಇವರು ಯಾವ ಪ್ರಶಂಸೆ, ಪಾರಿತೋಷಕ ಗಳಿಗೆ ಆಸೆ ಪಡದೆ ತಮ್ಮ ಎರಡು ಕ್ಷೇತ್ರಗಳಲ್ಲಿ ಉತ್ತಮ ಬೆಳೆಯನ್ನು ಸಮಾಜಕ್ಕೆ ನೀಡಿದ ಮಹಾನುಭಾವರಾಗಿ 1998ರ ಜೂನ್ 29 ರಂದು ದೈವಾಧೀನರಾದರು.


ಜಾಹಿರಾತು

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ**

**Sri Srinivasa Nilaya Dharmika Sabha Mandira**

**ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ**

**ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085**

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**

**ಸ್ಥಳದ ಬಾಡಿಗೆ ಇರುವುದಿಲ್ಲ.**

**ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು**

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

# ಭಾಯಿ ಬಾಲ್‌ಮುಕುಂದ್

– ಕೆ.ಎನ್. ಛಾಯಾಪತಿ, ಮಹಾಸಭಾ. ಉಪಾಧ್ಯಕ್ಷರು



"ಇಂದು ನನಗೆ ಅತ್ಯಂತ ಆನಂದವಾಗುತ್ತಿದೆ.ಬಾದಶಃ ಔರಂಗಜೇಬನ ಕಾಲದಲ್ಲಿ ನನ್ನ ಪೂರ್ವಜ ಭಾಯಿಮತಿದಾಸರು ಗುರುತೇಜ ಬಹದ್ದೂರ್ ಜೊತೆಯಲ್ಲಿ ಧರ್ಮಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ ಇದೇ ಊರಿನಲ್ಲಿ ಬಲಿದಾನ ನೀಡಿದ್ದರು. ಇದೇ ಊರಿನಲ್ಲಿ ಔರಂಗಜೇಬ್ ಅವರನ್ನು ಗರಗಸದಿಂದ ಎರಡು ತುಂಡಾಗಿ ಕತ್ತರಿಸಿದ್ದ. ಆ ನನ್ನ ಪೂರ್ವಜ ಭಾಯಿಮತಿದಾಸರ ರಕ್ತವೇ ನನ್ನಲ್ಲಿ ಹರಿಯುತ್ತಿದೆ. ನಾನು ಅವರನ್ನು ಅನುಸರಿಸುತ್ತಾ ಇದೇ ಊರಿನಲ್ಲಿ ಆತ್ಮಾಹುತಿ ನೀಡುವುದಕ್ಕಿಂತ ನನಗೆ ಬೇರೆ ಭಾಗ್ಯ ಯಾವುದಿದೆ."

ಇದನ್ನು ನುಡಿದ ಧೀರೋದಾತ್ತ ಯುವ ದೇಶಭಕ್ತ ಬೇರೆ ಯಾರೂ ಅಲ್ಲ, ಮೋಹ್ಯಾಲ್ ಬ್ರಾಹ್ಮಣ ಜನಾಂಗಕ್ಕೆ ಸೇರಿದ ಕ್ರಾಂತಿಕಾರಿ ಬ್ರಾಹ್ಮಣ ಯುವಕ. ಇವನು "ಮಾತೆ ಪೂಜಕ ನಾನು ಎನ್ನಯ ಶಿರವನಿಡುವೆನು ಅಡಿಯಲಿ" ಎಂಬ ಭಾವನೆಯಿಂದ ಸಾಂಸಾರಿಕ ಸುಖವನ್ನು ತೊರೆದು ದೇಶಕ್ಕಾಗಿ ಬಲಿದಾನಗೈದ ಮಹಾ ದೇಶಭಕ್ತ. ಭಾಯಿ ಬಾಲ್ಮುಕುಂದ್ 1889ರಲ್ಲಿ ಝೀಲಂ ಜಿಲ್ಲೆಯ ಕರಿಯಾಲ ಗ್ರಾಮದಲ್ಲಿ ಹುಟ್ಟಿದನು.

ಈಗ ಈ ಊರು ಪಾಕಿಸ್ತಾನದಲ್ಲಿದೆ. ತಂದೆ ಭಾಯಿ ಮಥುರಾದಾಸ್. ಔರಂಗಜೇಬನ ಕ್ರೌರ್ಯಕ್ಕೆ ಬಲಿಯಾದ ಹಿಂದುತ್ವವಾದಿ ಭಾಯಿಮತಿದಾಸ್ ಅವರಿಂದ ಭಾಯಿ ಎಂಬ ಪದ ನಂತರದ ದಿನಗಳಲ್ಲಿ ಎಲ್ಲರ ಹೆಸರಿನ ಮುಂದೆ ಬರಲಾರಂಭಿಸಿತು. ವಿದ್ಯಾರ್ಥಿದೆಸೆಯಲ್ಲೇ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲು ಆಸಕ್ತಿ. ಪದವಿ ಪಡೆದ ನಂತರ ಅವರು ಅಧ್ಯಾಪಕವೃತ್ತಿ ಪ್ರಾರಂಭಿಸಿದರು.ಆದರೆ ದೇಶದ ಆಗುಹೋಗುಗಳ ಚಿಂತನೆ ಅವರಲ್ಲಿ ತುಂಬಿದ್ದರಿಂದ ರಾಷ್ಟ್ರೀಯ ಚಳುವಳಿಯ ಬಾಂಧವ್ಯ ಅವರನ್ನು ಕಟ್ಟಾ ರಾಷ್ಟ್ರೀಯವಾದಿಯಾಗಿ ಮಾಡಿತು. ಬ್ರಿಟಿಷರನ್ನು ಈ ದೇಶದಿಂದ ತೊಲಗಿಸಬೇಕು, ತಾಯಿ ಭಾರತಿ ಸ್ವತಂತ್ರಳಾಗಬೇಕು ಎಂದು ನಿಶ್ಚಯಿಸಿದನು.

ಸ್ವಾತಂತ್ರ್ಯದ ಸಲುವಾಗಿ ಹೋರಾಟ ಮಾಡುವಾಗ ಆ ಬ್ರಿಟಿಷ್ ಅಧಿಕಾರಿಗಳನ್ನು, ಸೇನಾ ಪ್ರಮುಖರನ್ನು ಯಮಪುರಿಗಟ್ಟುವುದೇ ಎಲ್ಲಾ ಕ್ರಾಂತಿಕಾರಿಗಳ ಪ್ರಮುಖ ಅಜೆಂಡವಾಗಿತ್ತು. ಬಾಲ್ಮುಕುಂದನು ಅದೇ ದಾರಿಯಲ್ಲಿ ಸಾಗುತ್ತಿದ್ದ. ಅಂತಹ ಗಳಿಗೆ ಅವನಿಗೆ ಕೂಡಿ ಬಂದಿತು. ಯಾವ ತನ್ನ ಮುತ್ತಾತನನ್ನು ಔರಂಗಜೇಬನು ಗರಗಸದಿಂದ ಎರಡು ತುಂಡಾಗಿ ಕತ್ತರಿಸಿದನೋ ಅದೇ ಜಾಗ ದೆಹಲಿಯ ಚಾಂದಿನಿ ಚೌಕದಲ್ಲಿ 23 ಡಿಸೆಂಬರ್ 1912 ರಂದು ಬ್ರಿಟಿಷ್ ಅಧಿಕಾರಿಯಾದ ವೈಸ್ರಾಯ್ ಲಾರ್ಡ ಹಾರಿಂಜ್ ಎಂಬಾತ ಮೆರವಣಿಗೆಯಲ್ಲಿ ಹೋಗುತ್ತಿದ್ದ. ಆಗ ಅವನ ಮೇಲೆ ಬಾಂಬ್ ಎಸೆದೇ ಬಿಟ್ಟ ಬಾಲ್ ಮುಕುಂದ. ಆ ವೈಸ್ರಾಯ್ ಪ್ರಾಣಪಾಯದಿಂದ ಪಾರಾದರೂ ಗಾಯಗೊಂಡ. ಅವನ ಸಹಚರರು ಸತ್ತರು. ಇದಾದ ಐದು ತಿಂಗಳ ನಂತರ 17 ಮೇ 1913 ರಂದು ಲಾಹೋರಿನ ಲಾರಿನ್ಸಗಾರ್ಡನ್ ನಲ್ಲಿ ಕೆಲವು ಯುರೋಪಿಯನ್ನರು ಸೇರಿದ್ದರು. ಆಗ ಅವರ ಮೇಲೂ ಬಾಂಬ್ ಎಸೆದ. ಅವನಿಗಾಗಿ ಹುಡುಕಾಟ ಪ್ರಾರಂಭವಾಯಿತು. ಅಲ್ಲಿಂದ ತಪ್ಪಿಸಿಕೊಂಡು ಜೋಧ್‌ಪುರಕ್ಕೆ ಬಂದಿಳಿದ. ಅಲ್ಲಿಯ ಮಹಾರಾಜರ ಮಕ್ಕಳಿಗೆ ಬೋಧಕನಾಗಿ ಸೇರಿಕೊಂಡ.ಆದರೆ ಗೂಢಚರ್ಯದ ಫಲವಾಗಿ ಮುಕುಂದ್ ಅಲ್ಲಿ ಬಂಧಿತನಾದ. ಬಂಧಿತನಾಗಿದ್ದಾಗ ಒಂದು ಹೃದಯ ವಿದ್ರಾವಕ ಘಟನೆ ನಡೆಯಿತು.ಬಾಲ್ ಮುಕುಂದ ಅದಾಗಲೇ ಚಿಕ್ಕವಯಸ್ಸಿನ ಒಬ್ಬ ಸುಂದರ ರಾಮ್ ರಖೀದೇವಿಯೆಂಬ ಕನ್ಯೆಯನ್ನು ವಿವಾಹವಾಗಿದ್ದ. ವಿವಾಹವಾಗಿ ಆರು ತಿಂಗಳೂ ಕಳೆದಿರಲಿಲ್ಲ ಇವನು ಬಂಧಿತನಾದ. (ಇದೊಂದು ತಪ್ಪನ್ನು ಅನೇಕ ಕ್ರಾಂತಿಕಾರಿಗಳು, ಹೋರಾಟಗಾರರು ಮಾಡಿದ್ದಾರೆ. ಅಂದಿನ ದಿನಗಳಲ್ಲಿ ದೇಶಕ್ಕೋಸ್ಕರ ಹೋರಾಟ ಮಾಡುತ್ತೇನೆ ಎಂದು ಸಂಕಲ್ಪ ಮಾಡಿದಾಗ ಅವನ ಜೀವನ ನೀರ ಮೇಲಿನ ಗುಳ್ಳೆ ಇದ್ದಂತೆ ಕಾಲಮಿತಿ ಇಲ್ಲ ಎಂಬ ಸಹಜ ತಿಳುವಳಿಕೆ ಇರಬೇಕಿತ್ತು.ನನ್ನ ಬಲಿದಾನವಾದರೆ ನನ್ನನ್ನು ನಂಬಿ ನನ್ನ ಕೈ ಹಿಡಿದ ಹೆಣ್ಣಿನ ಮತ್ತು ಮಕ್ಕಳ ಗತಿ ಏನು.ಮುಂದೆ ಅವರ ಜೀವನ ಹೇಗೆ ಎಂದು ಯೋಚಿಸಬೇಕಾಗಿತ್ತು ಆಗ ಅವರಿಗೆ ಮದುವೆಯ ಆಸೆ ದೂರ ಸರಿಯುತ್ತಿತ್ತು. ಗೊತ್ತಿದ್ದೂ ಒಂದು ಹೆಣ್ಣಿನ ಜೀವನವನ್ನು ನರಕ ಸದೃಶ ಮಾಡುವುದು ತಪ್ಪಲ್ಲವೆ.)

ಅತ್ತ ಭಾಲ್ ಮುಕುಂದ ಜೈಲಿನಲ್ಲಿ ಏಕಾಂಗಿ. ಇತ್ತ ಪತ್ನಿ ರಾಮ್ ರಖೀದೇವಿ ಮನೆಯಲ್ಲಿ ಜನರಿದ್ದರೂ ಏಕಾಂಗಿ. ರಾಮ್ ರಖಿದೇವಿ ಬಹಳ ಚಿಂತೆಗೀಡಾಗಿದ್ದಳು. ಆ ಊರಿನ ಅನೇಕರು ಅವಳಿಗೆ ಸಾಂತ್ವನ ಹೇಳುತ್ತಿದ್ದರು, ಸಮಾಧಾನಪಡಿಸುತ್ತಿದ್ದರು. ಎಂದೂ ದೆಹಲಿಯನ್ನು ನೋಡದ ಹಳ್ಳಿಯ ಹುಡುಗಿ ರಾಮ್ ರಖೀ ದೇವಿ ಗಂಡನನ್ನು ನೋಡಲು ದೆಹಲಿಯ ಜೈಲಿಗೆ ಹೊರಟೇಬಿಟ್ಟಳು. ಜೈಲಿನಲ್ಲಿ ಗಂಡನನ್ನು ಭೇಟಿಯಾದಳು. ಕೈದಿಯ ಉಡುಗೆಯಲ್ಲಿದ್ದ ಗಂಡನನ್ನು ಕಂಡು

ಅವಳಿಗೆ ಕರುಳು ಕಿತ್ತುಬಂದಂತಾಯಿತು. ಅವಳು ಕೇಳಿದಳು–" ನಿಮಗೆ ಮಲಗಲು ಹಾಸಿಗೆ ಕೊಟ್ಟಿದ್ದಾರೆಯೇ?". "ನೀನೆಂತಹ ಮುಗ್ಧಳು, ಇಲ್ಲಿ ಹಾಸಿಗೆಗೇನು ಕೆಲಸ" ಎಂದ ಪತಿದೇವ "ನಾನು ನೆಲದ ಮೇಲೆ ಒಂದು ಕಂಬಳಿ ಹಾಕಿ ಕೊಂಡು ಮಲಗುತ್ತೇನೆ" ಎಂದನು. ರಾಮರಖೀಗೆ ಬಹಳ ದುಃಖವಾಯಿತು. ಮನೆಗೆ ಹಿಂದಿರುಗಿ ಬಂದಳು. ಮನೆಯವರೆಲ್ಲ ಮಾಳಿಗೆಯ ಮೇಲೆ ತಂಗಾಳಿಯನ್ನು ಸೇವಿಸುತ್ತಾ ಮಲಗಿದರೆ ಇವಳು ತನ್ನ ಗಂಡನನ್ನು ನೆನೆಯುತ್ತಾ ನೆಲಮಾಳಿಗೆಯ ಗಾಳಿ ಬೆಳಕು ಕಾಣದ ಒಂದು ಕೊಠಡಿಯ ಕತ್ತಲು ಮೂಲೆಯಲ್ಲಿ ಒಂದು ಕಂಬಳಿ ಹಾಸಿಕೊಂಡು ಮಲಗುತ್ತಿದ್ದಳು.

ಮತ್ತೊಮ್ಮೆ ಅನುಮತಿ ದೊರೆತಿದ್ದರಿಂದ ಗಂಡನನ್ನು ನೋಡಲು ಜೈಲಿಗೆ ತೆರಳಿದಳು. ಗಂಡನನ್ನು ಕೇಳಿದಳು–" ನೀವು ದಿನಕ್ಕೆ ಎಷ್ಟು ಬಾರಿ ಊಟ ಮಾಡುತ್ತೀರಿ?" ಗಂಡ ಹೇಳಿದ–" ಒಂದೇ ಬಾರಿ, ದಿನಕ್ಕೊಂದು ಬಾರಿ ರೊಟ್ಟಿ ತಿನ್ನುತ್ತೇನೆ." "ರೊಟ್ಟಿ ಹೇಗಿರುತ್ತದೆ?" ಎಂದಳು. ಆಗ ಅವಳಿಗೆ ಒಂದು ಚೂರು ರೊಟ್ಟಿಯನ್ನು ಕೊಟ್ಟ. ಮನೆಗೆ ಬಂದ ಅವಳು ತಾನು ಅದೇ ರೀತಿ ರೊಟ್ಟಿ ಚೂರು ಮಾಡಿಕೊಂಡು ದಿನಕ್ಕೆ ಒಂದು ಬಾರಿ ತಿಂದು ರಾತ್ರಿ ನೀರು ಕುಡಿದು ಮಲಗುತ್ತಿದ್ದಳು.

ಒಂದು ದಿನ ಅವಳು ಕೋಣೆಯಲ್ಲಿ ಕುಳಿತಿದ್ದಾಗ ಹೊರಗಡೆ ಹೆಂಗಸರು ಜೋರಾಗಿ ಅಳುವುದು ಕೇಳಿಸಿತು. ಇವಳಿಗೆ ಎದೆ ಡವಡವ ಹೊಡೆದುಕೊಂಡಿತು, ಬೆವರು ಹರಿಯಿತು, ಗಂಟಲು ಒಣಗಿತು. ಭಯಭೀತಳಾದಳು. ಯಾರೋ ಒಳಗೆ ಬಂದು ಬಾಲ್ ಮುಕುಂದರಿಗೆ ಗಲ್ಲು ಶಿಕ್ಷೆಯಾಯಿತು ಎಂದು ಹೇಳಿದರು. ಆಕಾಶವೇ ತಲೆಯಮೇಲೆ ಬಿದ್ದಂತಾಯಿತು. ಅವಳು ಗರಬಡಿದಂತೆ, ಸಿಡಿಲೆರಗಿದಂತಾಗಿ ಉಗುಳು ನುಂಗಿಕೊಂಡು ಗಂಭೀರವಾದಳು. ಕೊನೆಯದಾಗಿ ಗಂಡನನ್ನು ಮಾತನಾಡಿಸಲು ಜೈಲಿಗೆ ಹೋದಳು. ಗಂಡನನ್ನು ಕಂಡೊಡನೆ ಬಿಕ್ಕಿಬಿಕ್ಕಿ ಅಳಲು ಶುರು ಮಾಡಿದಳು. ಬಾಯಿಂದ ಮಾತೇ ಹೊರಡುತ್ತಿರಲಿಲ್ಲ. ಹೃದಯ ಕಿತ್ತು ಬರುತ್ತಿತ್ತು. ಕಣ್ಗತ್ತಲೇ ಆವರಿಸುತ್ತಿತ್ತು. ಗಂಡನ ಮುಖ ನೋಡುವುದು ಅಳುವುದು ಬಿಟ್ಟರೆ ಬೇರೇನು ಅವಳಿಗೆ ತೋಚುತ್ತಿರಲಿಲ್ಲ. ಆಗ ಆ ಪತಿದೇವ ಗೀತೆಯಲ್ಲಿ ಕೃಷ್ಣ ಸ್ಥಿತಪ್ರಜ್ಞನ ಬಗ್ಗೆ ಹೇಳಿದಂತೆ *ನನ್ನ ಚಿನ್ನ, ಅಳಬೇಡ. ಈ ಸಂಸಾರದಲ್ಲಿ ಏನಿದೆ. ಎಲ್ಲಾ ನಿಸ್ಸಾರ.ಯಾರೂ ಜೊತೆಯಲ್ಲಿ ಬರುವುದಿಲ್ಲ.ಗಂಡ, ಹೆಂಡತಿ, ತಾಯಿ, ಮಗು ಮುಂತಾದ ಸಂಬಂಧಗಳೆಲ್ಲ ಭ್ರಮೆ ಇದ್ದಂತೆ. ತಾಯಿನಾಡಿನ ಸಲುವಾಗಿ ಪ್ರಾಣಾರ್ಪಣೆ ಮಾಡುತ್ತಿರುವ ಗಂಡನನ್ನು ಪಡೆದ ನೀನೇ ಸೌಭಾಗ್ಯವಂತೆ. ಅಳಬೇಡ, ಕಣ್ಣೀರು ಸುರಿಸಬೇಡ". ರಾಮ್ ರಖೀದೇವಿ ಏನೂ ಮಾತನಾಡದೆ ದುಃಖ ನುಂಗಿಕೊಂಡು ಊರಿಗೆ ಹಿಂದಿರುಗಿದಳು.

ಅತ್ತ ಬಾಂಬ್ ಸ್ಫೋಟದ ವಿಚಾರಣೆಯಾಗಿ ಬಾಲಮುಕುಂದನ ಸ್ನೇಹಿತರಾದ ಮಾಸ್ಟರ್ ಅಮೀರ್ ಚಂದ್, ಅವದ್ ಬಿಹಾರಿ ಮತ್ತು ವಸಂತ್ ಕುಮಾರ್ ಬಿಶ್ವಾಸ್ ಇವರಿಗೆ ಡಿಸೆಂಬರ್ 8 1914ರಂದು ಮರಣದಂಡನೆ ವಿಧಿಸಲಾಯಿತು.

ದಿನಾಂಕ ಮೇ 8.1915 ಬಾಲ್‌ಮುಕುಂದನನ್ನು ಗಲ್ಲಿಗೇರಿಸುವ ದಿನ.ಆಗ ಅವನಿಗೆ ಕೇವಲ 32 ವರ್ಷ ವಯಸ್ಸು. ಅವನು ಹಸನ್ಮುಖಿಯಾಗಿದ್ದ. ಎಂದಿಗಿಂತಲೂ ಉತ್ಸಾಹಭರಿತನಾಗಿದ್ದ. ಅವನನ್ನು ವಧಾಸ್ಥಳಕ್ಕೆ ಸಿಪಾಯಿಗಳು ಕರೆದೊಯ್ಯುವಾಗ ಅವರಿಂದ ಬಿಡಿಸಿಕೊಂಡು ವಧಾಪೀಠಕ್ಕೆ ತಾನೇ ಹತ್ತಿ ನೇಣು ಕುಣಿಕೆಯನ್ನು ಕೊರಳಿಗೆ ಬಿಗಿದುಕೊಂಡ. *ವಂದೇ ಮಾತರಂ* ಎಂದು ಹೇಳುತ್ತಾ ತಾಯಿ ಭಾರತಿಯ ಕೊರಳಿನ ಮಾಲೆಯಲ್ಲಿ ಒಂದು ಪುಷ್ಪವಾಗಿ ಸೇರಿಹೋದ. ಪುಳುಚಾರು ಮೆದ್ದ ಬ್ರಾಹ್ಮಣ ಪೂಜೆ ಪ್ರವಚನಗಳಿಗೂ

ಬದ್ಧ ನೇಣುಗಂಬಕ್ಕೂ ಸಿದ್ಧ ಎಂದು ಜಗತ್ತಿಗೆ ತೋರಿಸಿಕೊಟ್ಟ. ಅವನ ಪಾರ್ಥಿವ ಶರೀರವನ್ನು ಕ್ರೂರಿ ಬ್ರಿಟೀಷರು ಅವರ ಮನೆಗೆ ಕಳಿಸಿಕೊಡಲಿಲ್ಲ.

ಇತ್ತ ಬಾಲ್ ಮುಕುಂದನ ಮನೆಯಲ್ಲಿ ಸ್ಮಶಾನ ಮೌನ. ಅಂತಿಮ ಸಂಸ್ಕಾರ ಮಾಡಲು ಶವಕ್ಕಾಗಿ ಕಾದು ಕುಳಿತವರಿಗೆ ನಿರಾಶೆ, ವೇದನೆ, ದುಃಖ. ಶಾಸ್ತ್ರವಿಧಿಗಳೆಲ್ಲ ಮಣ್ಣುಪಾಲು. ಇದೆಂತಹ ವಿಧಿಯಾಟ. ದೇಶಕ್ಕೋಸ್ಕರ ಪ್ರಾಣಾರ್ಪಣೆ ಮಾಡಿದವನ ಕುಟುಂಬಕ್ಕೆ ಅವನ ಅಂತಿಮ ದರ್ಶನದ ಅವಕಾಶವೂ ಇಲ್ಲವೆ? ಇದೆಂತಹ ದುರ್ವಿಧಿ, ದುರ್ದೈವ, ದೌರ್ಭಾಗ್ಯ. ಇಂತಹ ಸಮಯದಲ್ಲೆ ಒಮ್ಮೊಮ್ಮೆ ದೇವನಿರುವನೆಂಬ ನಂಬಿಕೆಯೇ ಅಲುಗಾಡುತ್ತದೆಯಲ್ಲವೆ. ಪಾಪ ರಾಮ್‌ರಖಿಯ ಸ್ಥಿತಿಯನ್ನು ನೆನಸಿಕೊಂಡರೆ ನಮ್ಮ ಹೃದಯವೂ ವಿಲವಿಲ ಒದ್ದಾಡುತ್ತದೆ, ಮನಸ್ಸು ಕರಗಿ ನೀರಾಗುತ್ತದೆ. ನಮ್ಮ ದೇಶಬಾಂಧವರ ಅನೈಕ್ಯತೆಯ ಪಾಪದ ಫಲವಲ್ಲವೆ ಇದು. ಗಂಡನ ಜೊತೆ ಸಂಸಾರ ಮಾಡುವ ಕನಸುಗಳನ್ನು ಕಟ್ಟಿಕೊಂಡಿದ್ದ ಅವನ ಸುಂದರ ಪತ್ನಿ ರಾಮ್‌ರಖಿಯನ್ನು ಸಮಾಧಾನ ಪಡಿಸಲು ಅನೇಕರು ಪ್ರಯತ್ನಿಸುತ್ತಿದ್ದಾಗ ಅವಳು–ಈಗೇನಾಯಿತು? ನನಗೆ ಅವರ ಮುಖದರ್ಶನ ಸಿಗಲಿಲ್ಲ ಅಷ್ಟೇ ತಾನೆ. ನಾನು ಕಳೆದ 15 ದಿನಗಳಿಂದ ವ್ರತವನ್ನು ಆಚರಿಸುತ್ತಿದ್ದೇನೆ. ನನ್ನ ಮನೋರಥ ಈಡೇರುವ ಆ ಕ್ಷಣ ಬಳಿಸಾರುತ್ತಿದೆ" ಎಂದು ಹೇಳಿದಳು. ಇಷ್ಟು ಹೇಳಿದ ರಾಮ್‌ರಖೀದೇವಿ ಅಖಂಡ ಮೌನವ್ರತ ಪ್ರಾರಂಭಿಸಿದಳು. ಹೃದಯದಲ್ಲಿ ವೇದನೆ, ಕಣ್ಣುಗಳಲ್ಲಿ ಧಾರಾಕಾರ ನೀರು. ಅನ್ನ ನೀರು ತ್ಯಜಿಸಿದಳು.ಹೀಗೆ ನಿರಾಹಾರದ ದಿನಗಳು ಕಳೆದವು. ಒಂದೇ ಸ್ಥಳದಲ್ಲಿ ಕುಳಿತು ದಿನ ನೂಕುತ್ತಿದ್ದಳು.ಎಲ್ಲೋ ಶೂನ್ಯದಲ್ಲಿ ನೆಟ್ಟ ದೃಷ್ಟಿ. ಮಾತಿಲ್ಲ, ಕಥೆಯಿಲ್ಲ.

ಆ ಒಂದು ದಿನ. ಆಕಾಶದಲ್ಲಿ ಸೂರ್ಯ ಬೆಳಗುತ್ತಿದ್ದ. ವಾತಾವರಣ ಶುಭ್ರವಾಗಿತ್ತು. ರಾಮ್‌ರಖಿ ಕುಳಿತಲ್ಲಿಂದ ಮೇಲೆದ್ದಳು. ಭಾವಿಯಿಂದ ನೀರು ಸೇದಿ ಸ್ನಾನ ಮಾಡಿದಳು. ಒಗೆದ ಸೀರೆ ಧರಿಸಿದಳು. ಮತ್ತೆ ಮಲಗುವ ಜಾಗಕ್ಕೆ ಹೋಗಿ ಮಲಗಿದಳು. ಅವಳ ಬಾಯಿಂದ ಮಾತು ಬರಲಾರಂಬಿಸಿತು–"ನೀವು ಬಹಳ ದಿನ ನನ್ನ ಪರೀಕ್ಷೆ ಮಾಡಿದಿರಿ. ನನ್ನ ದೇವರೇ, ಇನ್ನು ನಿಮ್ಮಿಂದ ದೂರವಿರಲು ಸಾಧ್ಯವಿಲ್ಲ. ನನ್ನ ತಾಳ್ಮೆ ಮೀರಿಹೋಗಿದೆ. ಇದೋ ಬಂದೆ... ಬರುತ್ತಿದ್ದೇನೆ.....ನಿಮ್ಮನ್ನು ಸೇರಲು ಬರುತ್ತಿದ್ದೇನೆ". ಅಸ್ಪಷ್ಟವಾದವು ಮಾತುಗಳು.ಕೊನೆಗೆ ಮಾತೂ ನಿಂತುಹೋಯಿತು. ಕೇವಲ ತುಟಿಗಳು ಸ್ವಲ್ಪ ಸ್ವಲ್ಪ ಅಲುಗಾಡುತ್ತಿದ್ದವು. ನಂತರ ಅದೂ ನಿಂತುಹೋಯಿತು. ಅವಳ ಪ್ರಾಣ ಅವಳ ಗಂಡನಲ್ಲಿ ಸೇರಿಹೋಯಿತು. ಅವಳೊಬ್ಬ ಸತಿಯಾದಳು.

**"ಭಾರತ್ ಮಾತಾಕೀ ಜೈ"**

ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ

**ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು**

**– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್**

ಇದೇ ಸತ್ಯವನ್ನೇ ಖಗೋಳದಲ್ಲಿರುವ ಗ್ರಹಗಳು ವ್ಯಕ್ತಪಡಿಸುತ್ತಿರುವುದರಿಂದ ಖಗೋಳದಲ್ಲಿರುವ ಸೂರ್ಯಚಂದ್ರಾದಿಗಳ ಮೇಲೆ ಸಪ್ತಧಾತುಗಳ ವಿಷಯವನ್ನು ಚಿಂತಿಸುವುದುಂಟು. ವಾಸ್ತವಿಕವಾಗಿ ಅದು ನಮ್ಮ ದೇಹದ ಸಪ್ತಧಾತುಗಳ ಚಿಂತನೆಯೇ ಆಗಿದೆ. ಸೂರ್ಯನನ್ನು ಕೇಂದ್ರವಾಗಿರಿಸಿಕೊಂಡು ಯಾವ ರೀತಿಯಲ್ಲಿ ಕುಜ ಮೊದಲಾದ ತಾರಾಗ್ರಹಗಳು ಮತ್ತು ಚಂದ್ರನು ಪರ್ಯಟನೆಯನ್ನು ಮಾಡುತ್ತಿರುವರೋ, ಅದೇ ರೀತಿ ಮೂಳೆಯನ್ನು ಸುತ್ತುವರಿದು ರಸ, ರಕ್ತ, ಮಾಂಸ, ಮಜ್ಜೆ, ಮೇದಸ್ಸು, ಅಸ್ಥಿ, ಶುಕ್ರಗಳೂ ಸಹ ತಮ್ಮ ಸ್ಥಿತಿಯನ್ನೂ, ಕ್ರಿಯೆಯನ್ನೂ ಹೊಂದಿರುತ್ತವೆ. ಅವುಗಳೇ ವ್ಯವಸ್ಥೆಯಲ್ಲಿದ್ದಾಗ ಆರೋಗ್ಯ, ವೈಷಮ್ಯಗೊಂಡಾಗ ಅನಾರೋಗ್ಯ. ಶಾಸ್ತ್ರವೂ ಸಹ 'ಧಾತುಸಾಮ್ಯಂ ಅರೋಗತಾ' ಧಾತುಗಳ ಸಾಮ್ಯವೇ ಆರೋಗ್ಯ ಎಂದು ನಿರೂಪಿಸುತ್ತದೆ.

ಇದಲ್ಲದೆ ಈ ಹಿಂದೆ ನಿರೂಪಿಸಿದಂತೆ ದೇಹದಲ್ಲಿರುವ ಐದು ಭೂತಗಳನ್ನು ಕುಜಾದಿ ಐದು ಶಕ್ತಿಗಳು ನಿಯಮಿಸುತ್ತಿವೆ. ಮನಸ್ಸನ್ನು ಚಂದ್ರನು, ಆತ್ಮನನ್ನು ರವಿಯೂ ನಿಯಮಿಸುತ್ತಿದ್ದಾರೆ. ಈ ಒಡಲಿನಲ್ಲಿ ಪಂಚಭೂತಗಳಿಗೂ ಅವುಗಳಿಂದ ರೂಪಿತವಾಗುವ ಸಪ್ತಧಾತುಗಳಿಗೂ ಅವುಗಳ ಜೊತೆಗೆ ಕಾರ್ಯವೆಸಗುವ ಮನಸ್ಸಿಗೂ ಸ್ವರೂಪವನ್ನು ಒದಗಿಸುತ್ತಿರುವುವು ಸತ್ತ್ವ, ರಜಸ್, ತಮಸ್ಸೆಂಬ ಮೂರು ಶಕ್ತಿಗಳೇ ಆಗಿವೆ. ಅವುಗಳನ್ನೇ ದೈವೀಕ್ಷೇತ್ರದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರೆಂದೂ, ದೇಹದ ಮಟ್ಟದಲ್ಲಿ ವಾತ, ಪಿತ್ತ, ಶ್ಲೇಷ್ಮಗಳೆಂದೂ ತ್ರಿಧಾತುಗಳೆಂದೂ ವ್ಯವಹರಿಸಿದ್ದಾರೆ. ಈ ತ್ರಿಧಾತುಗಳಿಗೂ ಮೂಲದಲ್ಲಿ ಒಂದೇ ಒಂದಾದ ಚೈತನ್ಯವು ಎಲ್ಲವನ್ನೂ ಧರಿಸಿಕೊಂಡಿರುವುದರಿಂದ ಅದನ್ನೂ ಧಾತು ಎಂಬುದಾಗಿ ವ್ಯವಹರಿಸುವುದುಂಟು.

ಹೀಗೆ ದೇಹವನ್ನು ಧರಿಸಿರುವ ಚೈತನ್ಯವು, ಅದರ ಅನಂತರ ಸತ್ತ್ವ ಮೊದಲಾದ ತ್ರಿಗುಣಗಳು, ತರುವಾಯ ಮನಸ್ಸು, ಪಂಚಭೂತಗಳು, ಸಪ್ತಧಾತುಗಳು ಇವಿಷ್ಟರ ಸಮರಸವಾದ ವ್ಯವಹಾರದಿಂದ ಬದುಕು ಸಾಗಬೇಕಾಗಿದೆ. ವಧೂವರರ ಯೋಜನೆಯಲ್ಲಿ ಇವೆಲ್ಲದರ ಹೊಂದಾಣಿಕೆಯನ್ನು ಚಿಂತಿಸಬೇಕಾಗಿದೆ.

ಮನಸ್ಸು ಇಡೀ ಒಬ್ಬನ ಜೀವನದ ವ್ಯವಸ್ಥೆಯನ್ನು ನಿರ್ವಹಿಸುವುದರಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಒಬ್ಬೊಬ್ಬನ ಜನ್ಮಾಂತರದ ಪುಣ್ಯಪಾಪಗಳ ಫಲವನ್ನು ಅನುಭವಿಸಲೋಸುಗ ಮನಸ್ಸು ಸಾತ್ತ್ವಿಕ, ರಾಜಸಿಕ, ತಾಮಸಿಕ ಎಂಬ ಸ್ವರೂಪವನ್ನು ಹೊಂದಿ ಸಪ್ತಧಾತುಮಯವಾದ ಈ ಕೋಶಗಳಲ್ಲಿ ಜೀವದೊಡನೆ ಬಂದು ಸೇರುತ್ತದೆ. ಈ ಸಾತ್ತ್ವಿಕ, ರಾಜಸಿಕ, ತಾಮಸಿಕವಾದ ಮನಸ್ಸಿನ ಸ್ವರೂಪಗಳಲ್ಲೂ ಹಲವು ತಾರತಮ್ಯ ಇಲ್ಲದಿಲ್ಲ.

ಇಂತಹ ಸಾತ್ತ್ವಿಕ ಮೊದಲಾದ ಮನಸ್ಸಿನ ನಡೆಗಳು ವಧೂವರರಲ್ಲಿ ಹೊಂದಿಕೊಳ್ಳಬಲ್ಲದೇ ಎಂಬುದರ ಚಿಂತನೆಯನ್ನೇ ಗ್ರಹಮೈತ್ರ ಎಂಬುದಾಗಿ ಕರೆಯುತ್ತಾರೆ. ಒಬ್ಬೊಬ್ಬರ ಸಾತ್ತ್ವಿಕ, ರಾಜಸಿಕ, ತಾಮಸಿಕವಾದ ನಡೆಗಳು ಇನ್ನೊಬ್ಬರಿಗೆ ಪೋಷಕವಾಗಿಯೂ ಇರಬಹುದು; ವಿರೋಧವಾಗಿಯೂ ಇರಬಹುದು.

ಪದಾರ್ಥಗಳ ಯೋಗದಲ್ಲಿಯೂ ಸಹ ಇಂತಹ ಅನೇಕ ವಿಧಿ ನಿಷೇಧಗಳನ್ನು ಲೋಕದಲ್ಲಿ ನೋಡುತ್ತೇವೆ. ಸಾತ್ತ್ವಿಕವಾದ ಅನ್ನದ ಜೊತೆಗೆ ರಾಜಸಿಕವಾದ ಮೆಣಸಿನಕಾಯಿ ಸೇರಿ ಒಂದು ರುಚಿಕರವಾದ ಯೋಗವನ್ನು ಉಂಟುಮಾಡಬಹುದು. ಅದೇ ಸಾತ್ತ್ವಿಕವಾದ ಬೆಲ್ಲದ ಜೊತೆಗೆ ಮೆಣಸಿನಕಾಯಿಯ ಯೋಗ ಅಷ್ಟು ಉತ್ಕೃಷ್ಟವಾಗುವುದಿಲ್ಲ. ತಾಮಸಿಕವಾದ ಇಂಗು ಸಾತ್ತ್ವಿಕವಾದ ಅನ್ನದ ಜೊತೆಗೆ ಸೇರಿ ಒಂದು ಯೋಗವನ್ನು ಉಂಟುಮಾಡಬಹುದಾದರೂ ಪಾಯಸದ ಜೊತೆಗೆ ಸೇರಿದರೆ ವಿಕಾರವಾಗಬಹುದು. ಹೀಗೆ ಸಾತ್ತ್ವಿಕ, ರಾಜಸಿಕ, ತಾಮಸಿಕವಾದ ಪದಾರ್ಥಗಳು ಹೊಂದಿಕೊಳ್ಳುವುದೂ ಹೊಂದದಿರುವುದೂ ಎರಡೂ ಉಂಟು.

ನಮ್ಮ ದೇಹವನ್ನೇ ಗಮನಿಸಿದರೂ ಸಹ ಸಾತ್ತ್ವಿಕ, ರಾಜಸಿಕ, ತಾಮಸಿಕವೆಂಬ ವಿಭಾಗವುಂಟು. ಒಂದು ದೃಷ್ಟಿಯಿಂದ ನಾಭಿಯಿಂದ ಕೆಳಭಾಗವು ರಜಸ್ ಪ್ರಧಾನವಾಗಿದ್ದರೆ, ನಾಭಿಯಿಂದ ಹೃದಯಪರ್ಯಂತವಾಗಿ ತಮಃಪ್ರಧಾನವಾದ ಭಾಗವಾಗಿದೆ. ಹೃದಯದಿಂದ ಮೇಲ್ಭಾಗವು ಸತ್ತ್ವಪ್ರಧಾನವಾಗಿದೆ. ಸತ್ತ್ವಪ್ರಧಾನವಾದ ಮೇಲ್ಭಾಗವನ್ನು ರಜಸ್ ಮತ್ತು ತಮಃಪ್ರಧಾನವಾದ ತೋಳುಗಳು ಸಂರಕ್ಷಿಸುತ್ತದೆ. ಹೀಗೆ ಪರಸ್ಪರ ಪೋಷ್ಯಪೋಷಕಭಾವವುಂಟು. ಕೈಗಳು ನೇರವಾಗಿ ತಲೆಯನ್ನು ಕಾಪಾಡುವಂತೆ ಕಾಲುಗಳು ಕಾಪಾಡಲಾರವು. ಅವುಗಳು ದೂರದಿಂದ ಸಹಕಾರ ನೀಡಬಲ್ಲವು. ಹೀಗೆ ಹಲವು ಪರಿಯ ಹೊಂದಾಣಿಕೆಗಳು ನಮ್ಮ ದೇಹವನ್ನು ರಕ್ಷಿಸಲು ಸಹಾಯಕವಾಗಿದೆ.

ಗ್ರಹಮೈತ್ರ ಎಂಬುದು ಚಂದ್ರನ ಮೂಲಕ ವ್ಯಕ್ತವಾಗುವ ಮನಸ್ಸಿನ ಸಾತ್ತ್ವಿಕಾದಿ ಭೇದಗಳನ್ನೂ ಮತ್ತು ವಧೂವರರ ಮನಃಪ್ರಕೃತಿಯ ಹೊಂದಾಣಿಕೆಯನ್ನೂ ತಿಳಿಯಪಡಿಸುತ್ತದೆ. ಚಂದ್ರನು ಯಾವ ರಾಶಿಯಲ್ಲಿ ಜನ್ಮಕಾಲದಲ್ಲಿ ಸಂಚರಿಸುವನೋ ಆ ರಾಶಿಯ ಅಧಿಪತಿಯು ಸಾತ್ತ್ವಿಕ ಗ್ರಹನಾದರೆ ಮನಸ್ಸು ಸಾತ್ತ್ವಿಕ, ಅವನು ರಾಜಸಿಕನಾದರೆ ಮನಸ್ಸು ರಾಜಸಿಕ, ತಾಮಸಿಕಗ್ರಹವಾದರೆ ಮನಸ್ಸು ತಾಮಸಿಕವೆಂಬ ವಿಭಾಗಕ್ಕೆ ಸೇರುತ್ತದೆ. ಚಂದ್ರ, ಸೂರ್ಯ, ಗುರು ಇವರು ಸಾತ್ತ್ವಿಕರೆಂದು ತಿಳಿದು ಬಂದಿದೆ. ಅಲ್ಲದೆ ಗ್ರಹಗಳಿಗೂ ಪರಸ್ಪರ ಶತ್ರುತ್ವ, ಮಿತ್ರತ್ವವೆಂಬ ವ್ಯವಹಾರವಿದೆ.

ಖಗೋಳದಲ್ಲಿರುವ ಗ್ರಹಗಳಿಗೆ ಕೇವಲ ಇದನ್ನು ಅನ್ವಯಿಸುವುದರಲ್ಲಿ ತಾತ್ಪರ್ಯವಿಲ್ಲ. ಈ ದೇಹದಲ್ಲಿ ಕೆಲಸ ಮಾಡುವ ಶಕ್ತಿಗಳಿಗೆ ಅನ್ವಯಿಸಿಕೊಳ್ಳಬೇಕು. ಒಂದು ಶಕ್ತಿಯು ಇನ್ನೊಂದು ಶಕ್ತಿಯನ್ನು ಹರಣ ಮಾಡುವುದನ್ನು ಶತ್ರುತ್ವವೆಂದೂ, ಪೋಷಿಸುವುದನ್ನು ಮಿತ್ರತ್ವವೆಂದೂ ಬಗೆದಿದ್ದಾರೆ. ಗ್ರಹಶಕ್ತಿಗಳಲ್ಲಿ ಪರಸ್ಪರ ಮಿತ್ರರಾಗಿಯೂ, ಒಬ್ಬ ಮಿತ್ರ ಇನ್ನೊಬ್ಬ ಶತ್ರುವಾಗಿಯೂ, ಪರಸ್ಪರ ಶತ್ರುಗಳಾಗಿಯೂ, ಒಬ್ಬ ತಟಸ್ಥ ಇನ್ನೊಬ್ಬ ಮಿತ್ರ ಅಥವಾ ಶತ್ರುವಾಗಿಯೂ ಇರುವುದುಂಟು.

ಇವೆಲ್ಲವೂ ಒಬ್ಬನ ಸಪ್ತಧಾತುಮಯಕೋಶ–ರೂಪವಾದ ಈ ದೇಹವನ್ನೂ ಅವುಗಳನ್ನು ಬಳಸಿಕೊಂಡು ಕರ್ಮಾನುಸಾರವಾಗಿ ಬದುಕುವ ಮನಸ್ಸನ್ನೂ ತಿಳಿಸುತ್ತದೆ. ರಸ, ರಕ್ತ ಮೊದಲಾದ ಧಾತುಗಳಲ್ಲೂ ಸಹ ಒಂದು ಗ್ರಹಮೈತ್ರವೆಂದಾಗ ಹೀಗೆ ಒಂದು ಇನ್ನೊಂದನ್ನು ಉಪಮರ್ದಿಸದೇ ಇರುವುದೇ ಆಗಿದೆ. ಅದನ್ನೇ ಇಲ್ಲಿ ಹೊಂದಾಣಿಕೆಯೆಂದು ಬರೆಯಲಾಗಿದೆ. ಪರಸ್ಪರ ಪೋಷಿಸುವ ಮನೋಧರ್ಮ ವಧೂವರರಲ್ಲಿ ಇರುವಂತಾದರೆ ಬಾಳಿನಲ್ಲಿ ಇಹಪರಗಳ ಸೌಖ್ಯ, ಇಲ್ಲವಾದರೆ ಪರಸ್ಪರ ಕ್ಲೇಶ. ಇದರ ಚಿಂತನೆಯೇ ಗ್ರಹಮೈತ್ರದ ಅನುಸಂಧಾನವಾಗಿದೆ.

**ಮುಂದುವರೆಯುವುದು...**

ಬ್ರಾಹ್ಮಣ ವಧೂವರ ವೇದಿಕೆ

**BRAHMIN MATRIMONIAL**

**Mahathi Matrimonial**

**ಮಹತಿ ಮ್ಯಾಟ್ರಿಮೋನಿಯಲ್**


**ಸೂಕ್ತ ಪ್ರೊಫೈಲ್ ಗಳಿಲ್ಲದಿದ್ದರೆ ಹಣ ಪಾವತಿಸುವ ಅಗತ್ಯವಿಲ್ಲ**

**ನಮ್ಮಲ್ಲಿ**
**21 ರಿಂದ 48 ವರ್ಷದ ವಧುಗಳು**
**ಮತ್ತು**
**24 ರಿಂದ 55 ವರ್ಷದ ವರಗಳ**
**FIRST / SECOND MARRIAGE**
**ನ ಮಾಹಿತಿಯನ್ನು ಹೊಂದಿದ್ದೇವೆ**

**www,mahathimatrimonial.com**

**BENGALURU**
**VIJAYNAGAR CLUB ROAD**
**9741111173**


## ತ್ರಿಮತಸ್ಥ ಸಾಮೂಹಿಕ ಉಪನಯನ



**ಶ್ರೀ ಶಂಕರ ಜಯಂತಿ ಪ್ರಯುಕ್ತ**
ದಿನಾಂಕ 12.05.2024 ರಂದು
**ಗುರುರಾಜ ಕಲ್ಯಾಣ ಮಂಟಪ,**
ಬಿ.ಜಿ. ರಸ್ತೆ, ಚಿಕ್ಕಬಳ್ಳಾಪುರದಲ್ಲಿ ತ್ರಿಮತಸ್ಥ ಬ್ರಾಹ್ಮಣ ವಟುಗಳ ಸಾಮೂಹಿಕ ಉಪನಯನವನ್ನು ಏರ್ಪಡಿಸಲಾಗಿದೆ.

**ಉಪನಯನ ಮಾಡಲಿಚ್ಛಿಸುವವರು ವ್ಯವಸ್ಥಾಪಕರಾದ ಶ್ರೀ ಆರ್. ಶ್ರೀನಿವಾಸ, ಅಂಕಣಗೊಂದಿ 0008010367 / 9108329132 ರವರನ್ನು ಸಂಪರ್ಕಿಸಬಹುದು.**


Strategic Academic Alliance with
Resonance
Educating for better tomorrow
33 YEAR'S OF LEADERSHIP
BASE
Be Ahead with Sustained Excellence
SUJIT ADIGA
(JEE ADV) AIR 441
SRIJAN M H
(NEET) AIR 60
ARJUN K
(KCET) RANK 2
BASE has achieved Top 20 Ranks in 2nd PU Exams for the past 2 year (2022 & 2023)
IIT-JEE | NEET | CET
For 1st & 2nd PU | 11th & 12th (CBSE | ICSE)
1 and 2 Year Programs with Board Support
Classroom | Online
Foundation Program
For Class 8th to 10th
(Foundation Science & Technology)
with Board Support
CBSE | ICSE | STATE
BASE EDUCATIONAL SERVICES
Bengaluru | Mysuru | Hubballi
Tumakuru | Udupi | Sirsi
080-69605300
9538141504


ACT
FIBERNET
300+ LIVE TV CHANNELS
AND YOUR FAVOURITE
OTT PLATFORMS
AT NO EXTRA COST
WITH ACT FIBERNET PLANS
ACT PREMIUM BONANZA
100Mbps
@ ₹ 1050/-
www.actcorp.in
91 21 21 21 21
*T&C Apply.



SINCE 1948
CYCLE
Naivedya
Sambrani
CYCLE
Sandalum
SYMBOL OF QUALITY
CYCLE
three in one
PURE AGARBATHI
Om Shanthi
BLEND OF 5 PUJA OILS
Om Shanthi
Gold Class Kumkum

# ALPHA DESIGN TECHNOLOGIES







Pioneering Green Excellence
on the Global Stage
REVA University wins the International Green University
Award at the NYC Green School Conference 2023.
International
GREEN
UNIVERSITY
REVA
UNIVERSITY
NYC GREEN
SCHOOL


With Best Compliments From :
KAVERI
ENTERPRISES
ಕಾವೇರಿ
ಎಂಟರ್‌ಪ್ರೈಸಸ್
ಹೋಲ್‌ಸೇಲ್ ಕಿರಾಣಿ ಮಾರಾಟಗಾರರು
ಸಕ್ಕರೆ, ಗೋಧಿ ಮತ್ತು
ಗೋಧಿ ಉತ್ಪನ್ನಗಳು
ಅಕ್ಕಿ, ಆಯಿಲ್
BUNGE MASTER
LINE BAKERY
PRODUCTS
# 523/1Q,
BINNI COMPANY ROAD,
DAVANGERE - 577001
Ph : 98451 08864

# ಸರ್ ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

## SIR M. VISVESVARAYA CO-OPERATIVE BANK LTD.

# 109, ಪ್ರಧಾನ ಕಛೇರಿ, ಶಂಕರಮಠದ ರಸ್ತೆ, ಶಂಕರಪುರಂ, ಬೆಂಗಳೂರು – 560 004.

ಸಾಮಾನ್ಯ ನಾಗರೀಕರಿಗೆ 8%

ಮಾನ್ಯ ಸದಸ್ಯರು ಹಾಗೂ ಗ್ರಾಹಕರಿಗೆ

ಹೊಸ ವರ್ಷ – 2024 ಮತ್ತು ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು

ಹಿರಿಯ ನಾಗರೀಕರಿಗೆ 8.50%

**ಠೇವಣಿಗಳ ಮೇಲಿನ ಆಕರ್ಷಕ ಬಡ್ಡಿದರ**

| ಕ್ರಮ ಸಂಖ್ಯೆ | ಅವಧಿ | ಬಡ್ಡಿದರ (%) | |
|---|---|---|---|
| | | ಸಾಮಾನ್ಯ | ಹಿರಿಯ ನಾಗರೀಕರಿಗೆ |
| 1 | 30 ದಿನದಿಂದ 180 ದಿನಗಳವರೆಗೆ | 5.50 % | 5.50 % |
| 2 | 181 ದಿನದಿಂದ 1 ವರ್ಷದವರೆಗೆ | 6.25% | 6.25% |
| 3 | 1 ವರ್ಷದಿಂದ 3 ವರ್ಷದವರೆಗೆ | 7.50% | 7.75% |
| 4 | 3 ವರ್ಷದಿಂದ 5 ವರ್ಷದವರೆಗೆ | 7.75% | 8.00% |
| 5 | 5 ವರ್ಷ ಮತ್ತು ಮೇಲ್ಪಟ್ಟು | 8.00% | 8.50% |
| 6 | ಉಳಿತಾಯ ಖಾತೆ | 4% | |

**ನಿಮ್ಮ ಅವಶ್ಯಕತೆಗೆ ತಕ್ಕಂತೆ ಸಾಲಗಳು ಆಕರ್ಷಕ ಬಡ್ಡಿದರಗಳಲ್ಲಿ**

ಗೃಹ ಸಾಲ ರೂ. 140 ಲಕ್ಷದವರೆಗೆ ಪ್ರಾರಂಭಿಕ 9% ವಾರ್ಷಿಕ (ಮಹಿಳೆಯರಿಗೆ 8.90%)

ಚಿನ್ನಾಭರಣ ಸಾಲ ಅತಿಕಡಿಮೆ ಬಡ್ಡಿದರ 8.5% ವಾರ್ಷಿಕ (ನಿವ್ವಳ)



- ಗೃಹಸಾಲ–ಗೃಹ ನಿರ್ಮಾಣ, ಗೃಹ ಖರೀದಿ, ನವೀಕರಣ
- ವ್ಯಾಪಾರಸಾಲ–ಎಂ.ಎಸ್.ಎಂ.ಇ. ಕೈಗಾರಿಕೆ ಉದ್ಪಾದನೆ, ಸರಕು ವಹಿವಾಟು
- ಅಡಮಾನ ಸಾಲ – ಸ್ಥಿರಾಸ್ತಿ ಆಧಾರಿತ ಸಾಲ
- ವಾಹನ ಸಾಲ

* ಷರತ್ತು ಮತ್ತು ನಿಬಂಧನೆಗಳು ಅನ್ವಯ





**ಇತರೆ ಸೌಲಭ್ಯಗಳು :**

- SAFE LOCKER
- RTGS / NEFT
- ECS
- ATM RUPAY CARD







**ಹೆಚ್ಚಿನ ವಿವರಗಳಿಗಾಗಿ ನಮ್ಮ ಶಾಖೆಗಳನ್ನು ಸಂಪರ್ಕಿಸಬಹುದು**

ಕುಮಾರ ಪಾರ್ಕ್ ಪಶ್ಚಿಮ : 22956401/02
ರಾಜಾಜಿನಗರ : 22956406/07 /08
ಬಿ.ಎಸ್.ಕೆ. 3ನೇ ಹಂತ : 22956411/12
ಕೆಂಗೇರಿ ಉಪನಗರ : 22956415
ಬಿ.ಟಿ.ಎಂ. ಲೇಔಟ್ : 22956417/18
ಕೋಣನಕುಂಟೆ : 22956422
ಶಂಕರಮಠದ ರಸ್ತೆ : 22956405
ಜೆ.ಪಿ. ನಗರ : 22956409/10
ವಿಜಯನಗರ : 22956413/14
ಮತ್ತಿಕೆರೆ : 22956416
ರಾಜರಾಜೇಶ್ವರಿನಗರ : 22956421

**Contact : 080 22956419/420**

E-mail : corporate@vcb.co.in Website : www.vcb.co.in

ಸರ್ ಎಂ. ವಿಶ್ವೇಶ್ವರಯ್ಯ
ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
SIR M. VISVESVARAYA CO-OPERATIVE BANK LTD.
# 109, ಪ್ರಧಾನ ಕಛೇರಿ, ಶಂಕರಮಠದ ರಸ್ತೆ, ಶಂಕರಪುರಂ, ಬೆಂಗಳೂರು – 560 004.

## Recurring Deposit Maturity Amount Chart (RD)

| Sl. No. | RD Monthly Deposit Amount | Period | Total Amount Remitted | Maturity Amount (Gen. Public) | Maturity Amount (Senior Citizen) |
|---|---|---|---|---|---|
| 1 | 1,000 | 36 Months | 36,000 | 40,612 | 40,772 |
| | | 60 Months | 60,000 | 73,862 | 74,849 |
| 2 | 2,000 | 36 Months | 72,000 | 81,224 | 81,543 |
| | | 60 Months | 1,20,000 | 1,47,724 | 1,49,699 |
| 3 | 5,000 | 36 Months | 1,80,000 | 2,03,060 | 2,03,858 |
| | | 60 Months | 3,00,000 | 3,69,309 | 3,74,247 |
| 4 | 10,000 | 36 Months | 3,60,000 | 4,06,119 | 4,07,716 |
| | | 60 Months | 6,00,000 | 7,38,619 | 7,48,495 |
| 5 | 25,000 | 36 Months | 9,00,000 | 10,15,298 | 10,19,289 |
| | | 60 Months | 15,00,000 | 18,46,546 | 18,71,237 |

## Re-Investment Maturity Amount Chart (RI)

| Sl. No. | Deposit Amount | Period | Maturity Amount (Gen. Public) | Maturity Amount (Senior Citizen) |
|---|---|---|---|---|
| 1 | 10,000 | 36 Months | 12,589 | 12,682 |
| | | 60 Months | 14,859 | 15,228 |
| 2 | 20,000 | 36 Months | 25,179 | 25,365 |
| | | 60 Months | 29,719 | 30,456 |
| 3 | 50,000 | 36 Months | 62,947 | 63,412 |
| | | 60 Months | 74,297 | 76,140 |
| 4 | 1,00,000 | 36 Months | 1,25,895 | 1,26,824 |
| | | 60 Months | 1,48,595 | 1,52,280 |
| 5 | 5,00,000 | 36 Months | 6,29,474 | 6,34,121 |
| | | 60 Months | 7,42,974 | 7,61,398 |
| 6 | 10,00,000 | 36 Months | 12,58,948 | 12,68,242 |
| | | 60 Months | 14,85,947 | 15,22,795 |
| 7 | 25,00,000 | 36 Months | 31,47,370 | 31,70,605 |
| | | 60 Months | 37,14,868 | 38,06,988 |

pie PIERIAN SERVICES

Website : https://pierianservices.com

SIMPLIFY
BUSINESS OPERATIONS

ACCELERATE
AHEAD OF COMPETITION

GROW
TOWARDS SUCCESS

## In a Snapshot

**20 years**
**In Profession**
Prominent player in F&A Services since 2002

**1800+**
**Our People**
Highly trained and skilled professionals

**350+**
**Our Clients**
Span over 20 countries and spread across sectors

**12**
**Our Locations**
8 delivery centers in Asia and 4 global offices

## Our Offerings

**Managed Services**
- Finance & Accounting
- People Practice
- Business Processes
- Compliance & Taxation

**Risk Advisory**
- Internal Audit
- Sarbanes Oxley Compliance
- SOC
- Technology Risk
- Process Transformation

**Financial Advisory**
- Valuation Solution
- M&A Advisory
- Private Equity Advisory

**Digital**
- Data Analytics
- Intelligent Automation
- Enterprise Solutions

**Assurance and Advisory**
- Audit
- Account Advisory
- Quality Enablement

**Consulting**
- CFO Advisory
- Start-Up Advisory
- Tax and Transfer Pricing
- BPM Solutions

## Recognition

INDIA 500 BEST MSME AWARDS
ET NOW
siliconindia
LONDON & PARTNERS
INDIA EMERGING TWENTY
NITTE MSME AWARDS

## OUR PRESENCE

**INDIA**
BENGALURU
GURUGRAM
JAIPUR
MANGALORE
SHIVAMOGGA
CHANDIGARH
CHENNAI

**USA**
WASHINGTON DC
LEWES DE

**MIDDLE EAST**
ABU DHABI
SHARJAH

**SINGAPORE**

# ಗಾಯತ್ರಿ ಭವನ ಬೆಂಗಳೂರು ಆವರಣದಲ್ಲಿ ಶಿವರಾತ್ರಿ











PERIODICAL RATE

VIPRANUDI KANNADA MONTHLY

RNI No. KARKAN/2009/29931. Posted at BG PSO, Mysore Road, Bangalore-560 026,

Permitted to Post on 19-04-2024 Date of Publishing 18-04-2024




If undelivered please return to :

**VIPRANUDI**

Akhila Karnataka Brahmana Mahasabha (R.)

"Gayathri Bhavana", No. 3070, 9th Main Road

Gayathri Bhavana Road, (14th Cross) BSK 2nd Stage

BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar